ಇನ್ನೆಂದೂ ಕಾಣಲಾಗದ

ಬಿ.ಟಿ.ಆರ್.



ಏಪ್ರಿಲ್ ೬, ೯೦ ಭಾರತದ ಕಮ್ಯುನಿಸ್ಟ್ ಚಳುವಳಿಯ ಆಕಾಶದಲ್ಲಿ ಕತ್ತಲಾವರಿಸಿದ ದಿನ. ೬೮ ವರ್ಷಗಳ ಕಾಲ ಭಾರತದ ಕ್ರಾಂತಿಯ ದಿಕ್ಸೂಚಿಯಾಗಿದ್ದ ಧ್ರುವತಾರೆ ಅಸ್ತಮಿಸಿದ ದಿನ. ಲಕ್ಷ, ದಶ ಲಕ್ಷ ಕಾರ್ಮಿಕರ ಹೃದಯಗಳಲ್ಲಿ ಚೈತನ್ಯದ ಕಿಡಿ ಹೊತ್ತಿಸುತ್ತಿದ್ದ ಜ್ಯೋತಿಯೇ ನಂದಿ ಹೋದ ದಿನ.

೮೬ ವಯಸ್ಸಿನಲ್ಲಿಯೂ ಭಾರತದ ಉದ್ದಗಲಕ್ಕೂ ನವತರುಣ ನಂತೋಡಾಡಿ ಗುಡುಗಿನ ಮೊಳಗನ್ನು ಹೊಮ್ಮಿಸುತ್ತಿದ್ದ ಆ ಜೀವ ಇನ್ನಿಲ್ಲ. ಭಾರತದ ಆಳುವವರ್ಗಗಳ ಎದೆಯಲ್ಲಿ ನಡುಕವನ್ನು ಹುಟ್ಟಿಸುತ್ತಿದ್ದ ಹೃದಯವೇ ನಂದಿತು. ಭಾರತದ ಸಮಾಜದ ವೈವಿಧ್ಯವನ್ನು ವಿಶಾಲತೆಯನ್ನು ತಮ್ಮ ಕೈಯಳವಿನಲ್ಲಿ, ಮನದಗಲದಲ್ಲಿ ಹಿಡಿದಿಡಲು ಶ್ರಮಿಸಿದ ಮಹಾನ್ ಚಿಂತಕ. ದೇಶದ ರಾಜಕೀಯದ ಕಗ್ಗಂಟಿನಲ್ಲಿ ಕಾರ್ಮಿಕ ವರ್ಗವನ್ನು ಧೃಡವಾದ ಹೆಜ್ಜೆಗಳನ್ನೂರಿಸುತ್ತಾ ಮುನ್ನಡೆಸಿದ ನೇತಾರ ಇನ್ನಿಲ್ಲ. ನಾಯಕರೆಲ್ಲರ ನಾಯಕಮಣಿ ಇನ್ನೆಂದೂ ನಮ್ಮನ್ನು ಕಾಣದಂತೆ ಅಗಲಿ ಹೋಗಿದ್ದಾರೆ.

ಲಕ್ಷ ಲಕ್ಷ ಕಾರ್ಮಿಕರು ಸಾವಿರಾರು ಕಾರ್ಮಿಕ ನಾಯಕರು "ಬಿ.ಟಿ.ಆರ್. ಇದ್ದಾರೆ ನಮಗಿನ್ನೇನು ಚಿಂತೆ." ಎಂದು ನೆಮ್ಮದಿಯಾಗಿದ್ದ, ಅನುಭವದ ಸಾಗರವನ್ನು ಕಳೆದುಕೊಂಡು ಅನಾಥರಾಗಿದ್ದಾರೆ.

೧೯೦೪ರ ಡಿಸೆಂಬರ್ ೧೯ರಲ್ಲಿ ಭಾರತದ ರಾಜಕೀಯ ವಿವಾದಗಳ, ಕೇಂದ್ರವಾಗಿದ್ದ, ಮಂದ ಗಾಮಿಗಳ ತೀವ್ರಗಾಮಿಗಳ ಸಂಘರ್ಷದ ನೆಲೆಯಾಗಿದ್ದ ಪೂನಾದಲ್ಲಿ ಹುಟ್ಟಿದ ಇವರು ಜೀವನದುದ್ದಕ್ಕು ಸಂಘರ್ಷಗಳ, ಅಗ್ನಿಕುಂಡಗಳನೇಕವನ್ನು ಹಾದು ಬೆಂದು ಅಪರಂಜಿಯಾಗಿ ಹೊರ ಹೊಮ್ಮಿದ ಕ್ರಾಂತಿಕಾರಿ ಇವರು. ತಂದೆ ಮಂದಗಾಮಿ ಗೋಖಲೆಯವರಅನುಯಾಯಿ. ಮಗ ತೀವ್ರಗಾಮಿಗಳ ರಾಜಕೀಯದಿಂದ ಆಕರ್ಷಿತನಾದ ಯುವಕ. ಭಾರತದ ಸ್ವಾತಂತ್ರ್ಯ ಹೋರಾಟದ ಪಥವನ್ನು ಕನಸಿನ ಗಾಳಿಗೋಪುರಗಳ ಮಹಲುಗಳ ಅಂತಃಪುರದಿಂದ ಹೊರಗೆಳೆದು ಜೀವನದ ನಟ್ಟ ನಡುವಿಗಳೆಯುವ ಆ ಹೋರಾಟದಿಂದ ಜೀವನವನ್ನು ಆರಂಭಿಸಿದ ಈ ಬಾಲಕ ಜನ ಸಮುದಾಯದ ಮಧ್ಯೆಯೇ ತನ್ನ ಜೀವನವನ್ನು ಸವೆಸಿದ್ದಾರೆ. ➡ ಪುಟ ೮ ಕ್ಕೆ

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರ ಪತ್ರಿಕೆ

ಸಂಪುಟ ೧೨ | ಸಂಚಿಕೆ ೧೫ | ಏಪ್ರಿಲ್ ೧೫, ೧೯೯೦ | ರೂ. ೧.೫೦



ಚಿಂತನ ಶೀಲ ಹೋರಾಟಗಾರ

ಇ.ಎಂ.ಎಸ್.

೬೨ ವರ್ಷಗಳ ಕಾಲ ಪಕ್ಷದ ನೇತೃತ್ವ ವಹಿಸಿದ್ದ ೪೮ ವರ್ಷಗಳಿಂದ ಅಖಿಲ ಭಾರತ ಸಿ.ಐ.ಟಿ.ಯು.ನ ನೇತೃತ್ವ ವಹಿಸಿದ್ದ, ಕಾರ್ಮಿಕ ಚಳುವಳಿಯೊಂದಿಗೆ ನಿಕಟ ಸಂಬಂಧ ಹೊಂದಿದ್ದ, ಸಿ.ಪಿ.ಐ.(ಎಂ) ನಾಯಕರಲ್ಲಿಯೇ ಅತ್ಯಂತ ಅನುಭವಶಾಲಿ ಮುಖಂಡರು ಬಿ.ಟಿ.ಆರ್. ಎಂದು ಅವರ ದೀರ್ಘಕಾಲದ ಒಡನಾಡಿ, ಸಿ.ಪಿ.ಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ. ಇ.ಎಂ.ಎಸ್. ನಂಬೂದರಿ ಪ್ಪಾಡ್‌ರವರು ತಮ್ಮ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತಾ ಹೇಳಿದ್ದಾರೆ.

ಅವಿಭಕ್ತ ಕಮ್ಯುನಿಸ್ಟ್ ಪಕ್ಷ, ಸಿ.ಪಿ.ಐ.(ಎಂ)ಗೆ ಮಾತ್ರವಲ್ಲ. ಬೇರೆ ಪಕ್ಷದವರಿಗೂ ಇತರ ಪ್ರಗತಿ ಪರರಿಗೂ ನಾಯಕರಾಗಿದ್ದವರು. ಅವರು ಸ್ವಂತ ಜೀವನದಲ್ಲಿ ಸರಳತೆ, ಜೊತೆಗಾರರೊಡನೆ ಸಹೃದಯ ಸಂಬಂಧ, ಮಾರ್ಕ್ಸ್‌ವಾದ ಲೆನಿನ್‌ವಾದದ ವಿಷಯದಲ್ಲಿ ಯಾವ ಮುಲಾಜೂ ಇಲ್ಲದ ನಿಲುವು, ಇದರಿಂದಾಗಿ ಪಕ್ಷದ ಸಂಗಾತಿಗಳಲ್ಲಿ ಇವರ ಬಗ್ಗೆ ಅತೀವ ಅಭಿಮಾನ. ಬಿ.ಟಿ.ಆರ್. ನಿಧನದಿಂದ ಇವರೆಲ್ಲರೂ ದುಃಖಿತರಾಗಿದ್ದಾರೆ ಎಂದು ಇ.ಎಂ.ಎಸ್. ಹೇಳಿದ್ದಾರೆ.





"......... ಈಗ ಎಲ್ಲರೂ ಅಂಗೀಕರಿಸಿರುವ ಆಧುನಿಕ ವಿಚಾರಗಳನ್ನು ಬಿತ್ತಿದವರು ಕಮ್ಯುನಿಸ್ಟರು

ಬಿ.ಟಿ.ಆರ್. ದೇಶದ ಪ್ರಮುಖ ಮಾರ್ಕ್ಸ್‌ವಾದೀ ಚಿಂತಕರಾಗಿದ್ದರು. ಭಾರತೀಯ ಸಮಾಜದ ವಿವಿಧ ಆಯಾಮಗಳ ಬಗ್ಗೆ ಅವರ ತೀಕ್ಷ್ಣ, ವೈಜ್ಞಾನಿಕ, ವಿಶ್ಲೇಷಣೆಗಳು, ಸಿ.ಪಿ.ಐ.(ಎಂ)ನ ಧೋರಣೆಯನ್ನು ರೂಪಿಸಿ, ಅದನ್ನು ಒಂದು ಪ್ರಮುಖ ರಾಜಕೀಯ ಶಕ್ತಿಯಾಗಿ ಬೆಳೆಸುವಲ್ಲಿ ದೊಡ್ಡ ಪಾತ್ರ ವಹಿಸಿವೆ. ಸ್ವಾತಂತ್ರ್ಯ ಹೋರಾಟದಲ್ಲಿ ಕಮ್ಯುನಿಸ್ಟರ ಪಾತ್ರದ ಕುರಿತು ಕೆಲವರ ವಿಶ್ಲೇಷಣೆಯ ಕೆಲವು ತುಣುಕುಗಳು ಇಲ್ಲಿವೆ. "

ನಮ್ಮ ದೇಶದ ಸ್ವಾತಂತ್ರ್ಯ ಸಮರದಲ್ಲಿ ಕಮ್ಯುನಿಸ್ಟರ ಪಾತ್ರವನ್ನು ಸಾಮಾನ್ಯವಾಗಿ ಗುರುತಿಸುವುದಿಲ್ಲ. ಮಾತ್ರವಲ್ಲ ಚಾಕರಿಯ ಬರಹಗಾರರು, ಪಟ್ಟಬದ್ರ ಬೂರ್ಜ್ವಾ ಇತಿಹಾಸಕಾರರು ಸ್ವಾತಂತ್ರ್ಯ ಹೋರಾಟದ ವಿರೋಧಿಗಳೆಂದು ಕಮ್ಯುನಿಸ್ಟರನ್ನು ಆಗಾಗ ದೂಷಿಸುತ್ತಾರೆ.

ಸ್ವಾತಂತ್ರ್ಯ ಹೋರಾಟದಲ್ಲಿ ಕಮ್ಯುನಿಸ್ಟರು ಒಂದು ನಿರ್ಣಾಯಕ ಪಾತ್ರ ವಹಿಸಲಿಲ್ಲ ಎಂಬುದು ಸ್ವಯಂವೇದ್ಯ. ಅವರು ನಿರ್ಣಾಯಕ ಪಾತ್ರವಹಿಸಿದ್ದರೆ ಭಾರತೀಯ ಜನತೆ ಈಗ ಎದುರಿಸುತ್ತಿರುವ ಶೋಚನೀಯ ಪರಿಸ್ಥಿತಿಯಲ್ಲಿ ಇರುತ್ತಿರಲಿಲ್ಲ.

ಕಾಂಗ್ರೆಸ್ ಮುಖಂಡತ್ವದ ದೃಷ್ಟಿಕೋನ, ತಂತ್ರ, ಕಾರ್ಯಕ್ರಮ ರಾಷ್ಟ್ರೀಯ ಬೂರ್ಜ್ವಾ ವರ್ಗದ ರಾಜಿ ಮನೋಭಾವಕ್ಕೆ ತಕ್ಕುದಾಗಿದೆ. ಆದರಿಂದ ಅದು ದೇಶದ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ವ್ಯಾಪ್ತಿಯನ್ನು ಮಿತಿಗೊಳಿಸುತ್ತದೆ ಎಂದು ಕಮ್ಯುನಿಸ್ಟರು ತೋರಿಸಿಕೊಟ್ಟಾಗ ಅವರನ್ನು ಸ್ವಾತಂತ್ರ್ಯ ಹೋರಾಟವನ್ನು ಬುಡಮೇಲು ಮಾಡುವವರೆಂದು ಹೀಗಳೆಲಾಯಿತು. ಇದು ಭಾರತದಲ್ಲಿ ವರ್ಗ ಹೋರಾಟದ ಮುಂದಿಟ್ಟ ಪ್ರತಿಯೊಂದು ಹೆಜ್ಜೆಯನ್ನು ಕಾಂಗ್ರೆಸ್ ವಿರೋಧಿಸಿತು, ಬ್ರಿಟಿಷ್ ಸರಕಾರದ ದಮನದ ಮೂಲಕ ಅಡ್ಡಿ ಮಾಡಿತು. ರಾಷ್ಟ್ರೀಯ ಸಮರಕ್ಕೆ ಕ್ರಾಂತಿ ಕಾರಿ ತಿಳುವಳಿಕೆ ತಂದುದಕ್ಕೆ, ಆಗಿನ ರಾಷ್ಟ್ರೀಯ ಮುಖಂಡತ್ವದ ಮಿತಿಗಳನ್ನು ತೋರಿಸಿಕೊಟ್ಟದ್ದಕ್ಕೆ, ಜನಸಮೂಹಗಳಲ್ಲಿ ಈ ಹೋರಾಟದಲ್ಲಿ ತಮ್ಮ ಪಾತ್ರದ ಬಗ್ಗೆ ಪ್ರಜ್ಞೆ ಎಚ್ಚರಿಸಲು ಪ್ರಯತ್ನಿಸಿದ್ದಕ್ಕೆ ಕಮ್ಯುನಿಸ್ಟರು ಆ ಬೆಲೆತೆರಬೇಕಾಯಿತು.

ಸಾಮ್ರಾಜ್ಯಶಾಹಿ ಸಂಪರ್ಕ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸಬಲ್ಲ ಸಾಮರ್ಥ್ಯವಿದ್ದ, ಕೈಗಾರಿಕಾ ನಗರಗಳಲ್ಲಿ ತಮ್ಮ ಭಾರೀ ಸಂಖ್ಯೆಯ ಬಲವನ್ನು ಶಕ್ತಿಶಾಲಿಯಾಗಿ ಬಳಸಬಲ್ಲ ಕಾರ್ಮಿಕ ವರ್ಗ ಸ್ವಾತಂತ್ರ್ಯ ಹೋರಾಟದಲ್ಲಿ ವಹಿಸಬಹುದಾದ ಕ್ರಾಂತಿಕಾರಿ ಹಾಗೂ ಪರಿಣಾಮಕಾರಿ ಪಾತ್ರವನ್ನು ಕಮ್ಯುನಿಸ್ಟರು ಅರ್ಥ ಮಾಡಿಕೊಂಡಿದ್ದರು.

೧೯೩೦ ರ ದಶಕದಲ್ಲಿ ಕೆಲವೆಡೆ ಕಾಂಗ್ರೆಸ್ ಮಂತ್ರಿಮಂಡಲಗಳು ರಚನೆಯಾದಾಗ ಕಮ್ಯುನಿಸ್ಟರು ತೀವ್ರಗಾಮಿ ಕಾಂಗ್ರೆಸ್ಸಿಗರು ಮತ್ತು ಕಾಂಗ್ರೆಸ್ ಸಮಾಜವಾದಿಗಳೊಂದಿಗೆ ಜೈತರ ಸಂಘಟನೆ ಆರಂಭಿಸಿದರು. ಅವರಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಪ್ರಜ್ಞೆ ಜಾಗೃತಗೊಳಿಸಿ ಮುಂಬರಲಿದ್ದ ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಟಗಳನ್ನು ಎದುರಿಸಲು ಅವರನ್ನು ಅಣಿಗೊಳಿಸಿದರು...

ಇಂದು ವಿಚಿತ್ರವೆನಿಸಬಹುದು. ಆದರೆ ಈಗ ಚಾಲ್ತಿಯಲ್ಲಿರುವ ಎಲ್ಲಾ ಆಧುನಿಕ ವಿಚಾರಗಳಲ್ಲಿ ಸುಮಾರಾಗಿ ಎಲ್ಲವನ್ನೂ ಆರಂಭಿಸಿದವರು, ಮೊದಲು ಪ್ರತಿಪಾದಿಸಿದವರು ಕಮ್ಯುನಿಸ್ಟರು. ರಾಷ್ಟ್ರೀಯ ಆಂದೋಲನ ಕ್ರಮೇಣ ಈ ವಿಚಾರಗಳನ್ನು ಅಂಗೀಕರಿಸಲಾರಂಭಿಸಿತು. ಸಮಾಜವಾದದ ವಿಚಾರ ಬಿತ್ತಿದವರು ಕಮ್ಯುನಿಸ್ಟರು ಎಂದು ಎಲ್ಲರಿಗೂ ಗೊತ್ತಿದೆ. ಆದರೆ ಸಂಪೂರ್ಣ ಸ್ವಾತಂತ್ರ್ಯ ದ ಪರಿಕಲ್ಪನೆ ಯನ್ನೂ ಮೊದಲು ಪ್ರತಿಪಾದಿಸಿದವರು ಕಮ್ಯುನಿಸ್ಟರೆ ಎಂದು ಬಹುಮಂದಿಗೆ ತಿಳಿದಿಲ್ಲ....

ಕಮ್ಯುನಿಸ್ಟ್ ಪಕ್ಷ ಸ್ವಾತಂತ್ರ್ಯ ಹೋರಾಟ ದಾದ್ಯಂತ ಜನಸಮೂಹಗಳಿಗೆ, ಸಾಮ್ರಾಜ್ಯ ಶಾಹಿ ವಿರೋಧಿ ಹೋರಾಟಗಳ ಕ್ರಾಂತಿಯ ಆಗತ್ಯಗಳಿಗೆ ಈ ಮೂಲಕ ನಮ್ಮ ಜನರ ಶತಮಾನಗಳ ಬಡತನ, ಹಿಂದುಳಿಕೆ ಯನ್ನು ನಿವಾರಿಸಲು ಹೊಸ ದಾರಿ ಯೊಂದನ್ನು ತೆರೆಯಲು ಸದಾ ಬದ್ಧ ವಾಗಿತ್ತು. ಆದರೆ ಕಮ್ಯುನಿಸ್ಟರು ತಮ್ಮ ಗುರಿ ಸಾಧಿಸಲಾಗಲಿಲ್ಲ. ಏಕೆಂದರೆ ಅವರ ಬಲ ಕಾಂಗ್ರೆಸ್ ಮುಖಂಡತ್ವದ ಪ್ರಭಾವ ವನ್ನು ಮೀರಿ ನಿಲ್ಲುವಷ್ಟು ಇರಲಿಲ್ಲ.



ನನ್ನ ಸಂಗಾತಿ ಅಣ್ಣ

ಬಿ.ಟಿ.ಆರ್. ರವರ ಕೊನೆಯ ತಂಗಿ ಎಂಬುವುದಕ್ಕಿಂತ ಅವರ ಜೊತೆ ಅದೇ ದಾರಿಯಲ್ಲಿ ಹೆಜ್ಜೆಹಾಕಿದ ಸಂಗಾತಿ ಎಂಬುದೇ ಹೆಚ್ಚು ಹೆಮ್ಮೆಯ ವಿಷಯ. ಎಲ್ಲಾ ಕಷ್ಟಗಳನ್ನು ಚಳುವಳಿಯ ಆರಂಭಕಾಲದ ತೊಂದರೆಗಳನ್ನು ಸಹಿಸುವ ಧೈರ್ಯ ನನಗೆ ಸಿಕ್ಕಿದ್ದು ಅಣ್ಣನ ಸಹವಾಸದಿಂದ.

೧೯೪೦ರ ಕಾಲದ ಅಗ್ನಿ ಪರೀಕ್ಷೆ ಈಗಲೂ ನನಗೆ ಕಣ್ಣಿಗೆ ಕಟ್ಟಿದಂತಿದೆ. ಪಕ್ಷದ ಪ್ರಕಟಣೆಗಳನ್ನು, ಪತ್ರಿಕೆಗಳನ್ನು ಮಾರಾಟಮಾಡುವಾಗ ನಾನು, ನನ್ನ ಸಹೋದರಿ ಕುಸುಮ ಅತ್ತಿಗೆ ವಿಮಲ ಎದುರಸಬೇಕಾಗಿ ಬಂದ ಸಂಕಟಗಳು ಅಷ್ಟಿಷ್ಟಲ್ಲ. ನಮ್ಮ ರವಿಕೆಗಳನ್ನು ಹರಿದು ಹಾಕುವ ಪ್ರಸಂಗಗಳನ್ನು ಎದುರಿಸಿದ್ದೇವೆ. ಅನೇಕ ಅಪಮಾನಗಳನ್ನು ಸಹಿಸಿದ್ದೇವೆ. ಕಮ್ಯುನಿಸ್ಟ್ ಮಹಿಳೆಯರೆಂದರೆ ಸಾರ್ವಜನಿಕ ಆಸ್ತಿ ಎಂದು ಜನ ತಿಳಿದುಕೊಂಡ ಸಮಯ ಅದು. ಆಗ ಬಿಟಿಆರ್ ನಮಗೆ ಸಮಾಧಾನ ಮಾಡುತ್ತಿದ್ದರು. ಧೈರ್ಯ ತುಂಬುತ್ತಿದ್ದರು.

ನಮ್ಮ ತಂದೆ ತ್ರಯಂಬಿಕ ರಣದಿವೆ ಬ್ರಿಟಿಷ್ ಸರ್ಕಾರದ ಇನ್‌ಕಮ್ ಟ್ಯಾಕ್ಸ್ ಕಮೀಷನರ್ ಆಗಿದ್ದರು. ಆದರೂ ನಮ್ಮ ಮನೆಯಲ್ಲಿ ಪ್ರಗತಿಪರ ವಾತಾವರಣವಿತ್ತು. ಅವರು ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನಲ್ಲಿ ಸಕ್ರಿಯ ಪಾತ್ರವಹಿಸಿದ್ದರು.

ನನಗೆ ೮-೧೦ರ ವಯಸ್ಸಿನಲ್ಲೇ ಗುಪ್ತ ಸಭೆಗಳಲ್ಲಿ ಭಾಗವಹಿಸುವ ಅನಿವಾರ್ಯತೆ ಬಂದಿತ್ತು. ನನಗಾಗ ಅರ್ಥವಾಗುತ್ತಿರಲಿಲ್ಲ. ಸ್ತ್ರೀಸಮಾನತೆಯ ಬಗ್ಗೆ ಆಗಲೇ ಒತ್ತಾಯ ತರುತ್ತಿದ್ದೆ. ಸ್ತ್ರೀಯರ ಆಟದ ಬದಲು ಪುರುಷರ ಆಟ ಆಡುತ್ತಿದ್ದೆವು.

ನನ್ನ ಮತ್ತೊಬ್ಬ ಅಣ್ಣನ ಹೆಂಡತಿ ಮೆಟ್ರಿಕ್ ಪಾಸಾದಾಗ ಕಾಲೇಜಿಗೆ ಕಳುಹಿಸಲು ಕಾರಣ ಬಿ.ಟಿ.ಆರ್. ಪ್ರಯತ್ನವೇ. ಇದರಿಂದ ಸುತ್ತಮುತ್ತಲ ಜನರಿಗೆ ಅಸಮಾಧಾನವಾಗಿತ್ತು.

ಹರಿಜನರ ಪರವಾಗಿ ಆಗಲೇ ಪ್ರಯತ್ನ ಆರಂಭಿಸಿದ್ದರು. ಬಿ.ಟಿ.ಆರ್. ದಲಿತ ಹೆಣ್ಣು ಮಕ್ಕಳಿಗೆ ವಿಶೇಷ ಪಾಠದ ವ್ಯವಸ್ಥೆ ಮಾಡಿದ್ದರು. ಬಿ.ಟಿ.ಆರ್. ಇಂಗ್ಲೀಷ್ ಪಾಠ ಹೇಳುತ್ತಿದ್ದರು.


೧೯೪೬ರ ಒಂದು ಘಟನೆ ನೆನಪಾಗುತ್ತದೆ. ರಂಗ್ನೇಕರ್ ಮನೆಯಲ್ಲಿ ರಹಸ್ಯ ದಾಖಲೆಗಳಿದ್ದವು. ಅದು ಅಹಲ್ಯಾರ ಅತ್ತೆಯವರ ಕೈಯಲ್ಲಿತ್ತು. ಗಣೇಶನಮೂರ್ತಿಯ ಕೆಳಗೆ ಅದನ್ನು ಇಟ್ಟಿದ್ದರು. ರಹಸ್ಯ ದಾಖಲೆಗಳಿವೆಯೆಂದು ಸುಳಿವು ತಿಳಿದು ಪೋಲೀಸರು ಧಾಳಿ ಮಾಡಿದರು ತಕ್ಷಣ ಅತ್ತೆ ಗಣೇಶನ ಪೂಜೆಯಲ್ಲಿ ತೊಡಗಿದರು. ಪೋಲೀಸರು ಪೂಜಾ ಕೋಣೆಯಲ್ಲೂ ಹುಡುಕಾಡಿದರು.ಆದರೆ ದಾಖಲೆ ಗಣಪತಿ ಮೂರ್ತಿಯ ಕೆಳಗೆ ಇದ್ದುದರಿಂದ ಅವರ ಕೈಗೆ ಸಿಗಲಿಲ್ಲ. ಈ ಘಟನೆಯನ್ನು ಬಿ.ಟಿ.ಆರ್. ಹಲವಾರು ಸಲ ನಕ್ಕು ನೆನಪಿಸಿಕೊಳ್ಳುತ್ತಿದ್ದರು. ಪಿ.ಬಿ. ರಂಗ್ನೇಕರ್ ಬಿ.ಟಿ.ಆರ್. ರವರ ಅತ್ಯುತ್ತಮ ಸ್ನೇಹಿತರಾಗಿದ್ದರು. ಅವರನ್ನು ಪಕ್ಷಕ್ಕೆ ಕರೆತಂದಿದ್ದವರು ಬಿ.ಟಿ.ಆರ್. ರವರೇ.

ರಿನ್‌ನಾವಿಕರ ಚಳುವಳಿಯಲ್ಲಿ ನಾವೆಲ್ಲಾ ಮುಂದೆ ನಿಂತಿದ್ದೆವು. ಬ್ರಿಟಿಷ್ ಪೋಲೀಸರ ಗುಂಡು ಕ್ರಾಂತಿಯ ಜ್ವಾಲೆಯಂತಿದ್ದ ಕುಸುಮಾ ಕಾಲಿಗೆ ತಾಗಿತ್ತು.

ಕುಸುಮಾ, ನಾನು, ವಿಮಲಾ.......

ನನ್ನ ಉತ್ತಮ ಸಹೋದರ, ಉಜ್ವಲ ಕ್ರಾಂತಿಕಾರಿ, ಕಣ್ಣಿನ ಬೊಂಬೆಯಂತಿದ್ದ ಬಿ.ಟಿ.ಆರ್.. ನನಗೆ ಕಮ್ಯುನಿಸ್ಟ್ ಚಳುವಳಿಯ ಬಾಲಪಾಠಗಳನ್ನು ಹೇಳಿದ ಇವರನ್ನು ಮರೆಯಲು ಸಾಧ್ಯವಿಲ್ಲ.

ಅಹಲ್ಯಾ ರಂಗ್ನೇಕರ್



ಕಾಂ। ಬಿ.ಟಿ.ಆರ್ ಇನ್ನಿಲ್ಲ ಆದರೆ ಕಾಂ। ಬಿ.ಟಿ.ಆರ್. ಅಮರರು


ಭಾರತದ ಕಾರ್ಮಿಕ ವರ್ಗದ ಸಮರ ಧೀರ ಸಂಘಟನೆಯಿಂದ ಸಿ.ಐ.ಟಿ.ಯು.ವಿನ ಅಧ್ಯಕ್ಷರಾಗಿ ಮತ್ತು ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೊವಿನ ಪ್ರಮುಖರಾಗಿ ದೇಶದ ಕಾರ್ಮಿಕವರ್ಗದ ಚಳುವಳಿಯಲ್ಲಿ, ಕಮ್ಯುನಿಸ್ಟ್ ಚಳುವಳಿಯಲ್ಲಿ ಕಾಂ। ಬಿ.ಟಿ. ರಣದಿವೆಯವರು ನಿರ್ಣಾಯಕ ಪಾತ್ರ ವಹಿಸುತ್ತಾ ಬಂದಿದ್ದಾರೆ. ಇಂದು ದೇಶದಲ್ಲಿ "ಎಡ ಪಕ್ಷಗಳು ಮತ್ತು ಶಕ್ತಿಗಳು ಹೆಚ್ಚಿನ ರಾಜಕೀಯ ಪಾತ್ರವಹಿಸುವ ಸಾಮರ್ಥ್ಯವನ್ನು ಪಡೆದಿದ್ದರೆ ಅದರ ಶ್ರೇಯಸ್ಸಿನಲ್ಲಿ ದೊಡ್ಡ ಭಾಗ ಕಾಂ। ಬಿ.ಟಿ. ರಣದಿವೆ ಅವರಿಗೆ ಸಲ್ಲಬೇಕು.

ಏಪ್ರಿಲ್ ೬ ರಂದು ಬೆಳಗ್ಗೆ ೩.೧೫ಕ್ಕು ಕಾಂ। ಬಿ.ಟಿ.ಆರ್. ಮುಂಬಯಿಯಲ್ಲಿ ತಾತಾ ಆಸ್ಪತ್ರೆಯಲ್ಲಿ ಕೊನೆಯ ಉಸಿರು ಎಳೆದರು. ಅವರ ಬಳಿ ಅವರ ಪತ್ನಿ ಕಾ। ವಿಮಲಾ ಮತ್ತು ಸಹೋದರಿ ಕಾ। ಅಹಲ್ಯಾ ರಂಗ್ನೇಕರ್ ಇನ್ನಿತರ ಬಂಧುಗಳು ಉಪಸ್ಥಿತರಿದ್ದರು. ಅವರು ಆಸ್ಪತ್ರೆಯಲ್ಲಿದ್ದ ೧೦-೧೨ ದಿನಗಳಲ್ಲಿ ಕ್ಯಾನ್ಸರ್ ಬೇನೆಯಿಂದ ತೀವ್ರ ಬಾಧೆಗೆ ಒಳಗಾಗಿದ್ದರೂ, ಕಾಂ। ಬಿ.ಟಿ.ಆರ್. ಅದನ್ನು ಎದುರಿಸಿದ ರೀತಿ ಅವರು ಮರಣವನ್ನು ಎದುರಿಸಿದ ರೀತಿ ಎಲ್ಲರನ್ನು ಆಶ್ಚರ್ಯಗೊಳಿಸಿದೆ.

ಭಾರತ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಗಳ ಮಾತುಗಳಲ್ಲಿ ಹೇಳುವುದಾದರೆ "ಕಾಂ। ಬಿ.ಟಿ.ಆರ್. ನಮಗೆಲ್ಲರಿಗೂ ಹಿರಿಯ ಅಣ್ಣನಂತಿದ್ದರು. ದೇಶದಲ್ಲಿ ಪ್ರಜಾಸತ್ತಾತ್ಮಕ. ಚಳುವಳಿಯನ್ನು. ಕಮ್ಯುನಿಸ್ಟ್ ಚಳುವಳಿಯನ್ನು ನಡೆಸಿಕೊಂಡು ಹೋಗುವುದರಲ್ಲಿ ಅವರ ಮಾರ್ಗದರ್ಶನವು ಅಪೂರ್ವವೂ ಅತ್ಯಂತ ಸಮಂಜಸವೂ ಆಗಿತ್ತು. ಅದನ್ನು ಭರ್ತಿ ಮಾಡುವುದೇ ನಮ್ಮ ಎದುರು ಇರುವ ಮುಖ್ಯ ಸಮಸ್ಯೆಯಾಗಿದೆ.

ಕಾಂ। ಬಿ.ಟಿ.ಆರ್. ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿಯನ್ನು ಬೆಳೆಸುವುದರಲ್ಲಿ ಬಹಳಷ್ಟು ಕಾಳಜಿ ವಹಿಸಿದ್ದರು. ಕರ್ನಾಟಕದ ಹತ್ತು ಹಲವು ಪ್ರದೇಶಗಳ ಸಮ್ಮೇಳನಗಳ ಕಾಲದಲ್ಲಿ, ಇತರ ಸಮಯಗಳಲ್ಲಿ ಜನರನ್ನು ಭೇಟಿಯಾಗಿ ಇಲ್ಲಿನ ವಿಶಿಷ್ಟವಾದ ಪರಿಸ್ಥಿತಿಯನ್ನು ಸ್ವತಃ ಅಭ್ಯಸಿಸಿ, ಕಾರ್ಮಿಕರ ಜತೆ ಚರ್ಚೆ ನಡೆಸಿ ಮಾರ್ಗದರ್ಶನ ಮಾಡುತ್ತಿದ್ದರು. ಕರ್ನಾಟಕದ ಕಾರ್ಮಿಕರ, ರೈತರ ಮತ್ತು ನೌಕರರ ಚಳುವಳಿ ಮತ್ತು ಕಮ್ಯುನಿಸ್ಟ್ ಚಳುವಳಿಗೆ ಅವರ ನಿಧನದಿಂದ ತೀವ್ರ ಆಘಾತವುಂಟಾಗಿದೆ.

ಕಾಂ। ಬಿ.ಟಿ.ಆರ್. ಅತ್ಯಂತ ದೊಡ್ಡ ಮೇಧಾವಿ. ಅವರಿಗೆ ನಮ್ಮ ದೇಶದ ಹಳೆಯ ಸಂಸ್ಕೃತಿಯ ಪರಿಪೂರ್ಣ ಜ್ಞಾನವಿತ್ತು. ಮಾತ್ರವಲ್ಲ ಅತ್ಯಾಧುನಿಕ ವಿಜ್ಞಾನದ ಹೆಚ್ಚಿನ ತಿಳುವಳಿಕೆ ಇತ್ತು. ನಮ್ಮ ಸಂಸ್ಕೃತಿಯಲ್ಲಿ ಉತ್ತಮವಾದುದನ್ನು ಉಳಿಸಿಕೊಂಡು ಆಧುನಿಕ ಯುಗದಲ್ಲಿ ಭಾರತವು ತನ್ನ ಸಮಾಜದಲ್ಲಿ ಮೂಲಭೂತ ಬದಲಾವಣೆಯನ್ನು ಸಮಾಜವಾದಿ ದಿಕ್ಕಿನಲ್ಲಿ ತಂದು ಅದು ಜಗತ್ತಿನಲ್ಲಿ ಶ್ರೇಷ್ಠ ಪಾತ್ರ ವಹಿಸುವಂತೆ ಮಾಡಬೇಕೆಂಬುದೇ ಅವರ ಜೀವನದ ಏಕೈಕ ಗುರಿಯಾಗಿತ್ತು. ಈ ಗುರಿ ಸಾಧನೆಗೆ ಅವರು ಮಾಡಿದ ತ್ಯಾಗ, ಅವರು ನಡಸಿದ ಅಭ್ಯಾಸ, ಅವರು ಪಟ್ಟ ಶ್ರಮ ಅಷ್ಟಿಷ್ಟಲ್ಲ.



ಕಾಂ। ಬಿ.ಟಿ.ಆರ್. ತನ್ನ ಗುರಿ ಸಾಧನೆಗೆ ಮಾರ್ಕ್ಸ್‌ವಾದ ಲೇನಿನ್‌ವಾದ ಮಾರ್ಗದರ್ಶನದ ತತ್ವ ಎಂಬುದನ್ನು ಕಂಡುಕೊಂಡರು. ಅದನ್ನು ಭಾರತದ ವಿಶಿಷ್ಟ ಪರಿಸ್ಥಿತಿಗೆ ತನ್ನ ಇತರ ಸಂಗಾತಿಗಳ ಜತೆಗೂಡಿ ಅನ್ವಯಿಸಲು ಶ್ರಮಿಸಿದರು. ಇಂದು ದೇಶದಲ್ಲಿ ಭಾರತ ಮಾರ್ಕ್ಸ್‌ವಾದಿ ತತ್ವವು ರಾಜಕೀಯದಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದರೆ ಅದರ ರಾಜಕೀಯ ರೇಖೆಯನ್ನು ರಚಿಸುವುದರಲ್ಲಿ, ಅದರ ಸಂಘಟನೆಯನ್ನು, ದೃಢವಾದ ಹಳಿಗಳಲ್ಲಿ ಹಾಕುವುದರಲ್ಲಿ ಹಾಗೂ ಅದರ ನೇತೃತ್ವದಲ್ಲಿ ನಡೆಯುವ ಎಡರಂಗ ಸರ್ಕಾರಗಳು ಸರಿಯಾಗಿ ನಡೆಯುವಂತೆ ಮಾಡುವುದರಲ್ಲಿ ಅವರ ಪಾತ್ರ ಗಣನೀಯ.

ಕಾಂ। ಬಿ.ಟಿ.ಆರ್. ಸ್ವತಃ ಹೇಳಿದಂತೆ "ನಾನು ಹಲವು ತಪ್ಪುಗಳನ್ನು ಮಾಡಿದ್ದೇನೆ. ಅನುಭವದಿಂದ, ನನ್ನ ಸಂಗಾತಿಗಳ ಸಹಾಯದಿಂದ ಅವುಗಳನ್ನು ತಿದ್ದುಕೊಂಡು ಉತ್ತಮ ಕಮ್ಯುನಿಸ್ಟ್ ಆಗಿರುವುದಕ್ಕೆ ನಾನು ಪ್ರಯತ್ನಿಸಿದ್ದೇನೆ" ಎಂಬುದನ್ನು ಭಾರತದ ಎಲ್ಲಾ ಕಮ್ಯುನಿಸ್ಟರು ಆದರ್ಶವಾಗಿ ಇಟ್ಟುಕೊಳ್ಳಬೇಕು.

ಇಂದು ಕಾಂ। ಬಿ.ಟಿ.ಆರ್. ರವರ ಮರಣದಿಂದ ಉಂಟಾದ ಶೂನ್ಯತೆಯನ್ನು ಭರ್ತಿ ಮಾಡಲು ಭಾರತದ ಎಲ್ಲಾ ಕಮ್ಯುನಿಸ್ಟರು ಈಗ ಮಾಡುತ್ತಿರುವ ಕೆಲಸವನ್ನು ಗುಣಾತ್ಮಕವಾಗಿಯೂ, ಪ್ರಮಾಣಾತ್ಮಕವಾಗಿಯೂ ದ್ವಿಗುಣಗೊಳಿಸುವುದೊಂದೇ ಅವರಿಗೆ ನಾವು ಅರ್ಪಿಸುವ ಶ್ರದ್ಧಾಂಜಲಿ.

ಕಮ್ಯುನಿಸ್ಟರ ಮೇಲೆ ಇಂದು ಜವಾಬ್ದಾರಿ ಹೆಚ್ಚಿದೆ. ಕಮ್ಯುನಿಸ್ಟರ ಅಂತರರಾಷ್ಟ್ರೀಯತೆಯನ್ನು ಎತ್ತಿ ಹಿಡಿಯೋಣ. ದೇಶದಲ್ಲಿ ಜಾತೀಯ ಮತೀಯ ಶಕ್ತಿಗಳ ಪ್ರಭಾವವನ್ನು ಮುರಿಯಲು ಹೋರಾಡೋಣ. ದೇಶದ ಐಕ್ಯತೆ ಸಮಗ್ರತೆಯನ್ನು ರಕ್ಷಿಸೋಣ. ವಿಶಾಲ ಪ್ರಜಾಸತ್ತಾತ್ಮಕ ಶಕ್ತಿಗಳ ಚಳುವಳಿಯನ್ನು ಕಟ್ಟಿ ದೇಶದಲ್ಲಿ ಜನತಾ ಪ್ರಜಾಪ್ರಭುತ್ವ ಕ್ರಾಂತಿಯನ್ನು ಸಾಧಿಸೋಣ. ಈ ದಾರಿಯಲ್ಲಿ ದೃಢವಂತ ಸಾಗುವುದೇ ನಾವು ಕಾಂ। ಬಿ.ಟಿ.ಆರ್. ಗೆ ನೀಡುವ

ಅಗಲಿದ ದೀರ್ಘಕಾಲದ ಸಂಗಾತಿ, ಹಿರಿಯಣ್ಣನ ಕೊನೆಯ ದರ್ಶನಪಡೆಯುತ್ತಿರುವ ಪೊಲಿಟ್‌ಬ್ಯೂರೋ ಸದಸ್ಯರು



ಪೊಲಿಟ್ ಬ್ಯೂರೋ ಶ್ರದ್ಧಾಂಜಲಿ

"ಅಸಾಮಾನ್ಯ, ಹಿರಿಯ ಕ್ರಾಂತಿಕಾರಿಯ ಕೆಲಸ ಮುಂದುವರಿಸೋಣ"

ಪ್ರೀತಿಯ, ಆದರ್ಶ, ಧೀರ ಮುಂದಾಳು ಪಕ್ಷದ ಸ್ತಂಭ ನಮ್ಮನ್ನಗಲಿದ್ದಾರೆ ಎಂದು ಸಿ.ಪಿ.ಐ(ಎಂ) ಪೊಲಿಟ್ ಬ್ಯೂರೋ ಬಿ.ಟಿ.ಆರ್. ರವರಿಗೆ ಆದರ ಪೂರ್ವಕ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದೆ. ಪಿ.ಬಿ.ಗೆ, ಪಕ್ಷಕ್ಕೆ ಅವರ ನಿಧನದಿಂದ ಅತೀವ ದುಃಖವಾಗಿದೆಯೆಂದಿರುವ ಪೊಲಿಟ್ ಬ್ಯೂರೋ ಶ್ರದ್ಧಾಂಜಲಿ ಹೇಳಿಕೆ ಕಾಂ. ಬಿ.ಟಿ. ರಣದಿವೆಯವರು ಭಾರತ ದೇಶದ ದುಡಿಯುವ ವರ್ಗದ ಚಳುವಳಿಯ ಮಹಾನ್ ನಾಯಕರಾಗಿದ್ದರು ಎಂದಿದೆ. ಬಿ.ಟಿ.ಆರ್. ಎತ್ತಿ ಹಿಡಿದ ಉನ್ನತ ಮೌಲ್ಯಗಳಿಗಾಗಿ ತಮ್ಮನ್ನು ಅರ್ಪಿಸಿಕೊಳ್ಳಬೇಕೆಂದು ಪಿ.ಬಿ. ಪಕ್ಷದ ಎಲ್ಲಾ ಸದಸ್ಯರನ್ನೂ ವಿನಂತಿಸಿಕೊಂಡಿದೆ.

ಮಾರ್ಕ್ಸ್‌ವಾದ ಲೆನಿನ್‌ವಾದದಲ್ಲಿ ಬಲವಾಗಿ ನೆಲೆಯೂರಿರುವ ಕ್ರಾಂತಿಕಾರಿ ಚಳುವಳಿ ಬೆಳೆಯುವುದರಲ್ಲಿ ಇವರದ್ದು ದೊಡ್ಡ ಪಾತ್ರ, ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಿ ಅಖಿಲ ಭಾರತ ಮಟ್ಟದಲ್ಲಿ ವಿಶಾಲಗೊಳಿಸುವುದರಲ್ಲಿ ಅವರು ಆರಂಭದಿಂದಲೂ ಮುಖ್ಯ ಪಾತ್ರ ವಹಿಸಿದವರು ಎಂದು ಪಿ.ಬಿ. ಹೇಳಿದೆ.

ಬಿ.ಟಿ.ಆರ್. ರವರ ೬೦ ವರ್ಷಗಳ ದೀರ್ಘ ರಾಜಕೀಯ ಜೀವನ ಆರಂಭವಾದದ್ದು ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯಿಂದ ೧೯೨೦ರಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಅವರು ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸಿದರು. ಅಂದಿನಿಂದ ಭಾರತದಲ್ಲಿ ಪ್ರಜಾಪ್ರಭುತ್ವ, ಸಮಾಜವಾದದ ಸ್ಥಾಪನೆಗೆ, ಕಾರ್ಮಿಕ ವರ್ಗದ ಪಕ್ಷ ನಡೆಸುತ್ತಿರುವ ಹೋರಾಟಕ್ಕೆ ನಾಯಕತ್ವ ನೀಡುತ್ತಾ ಕೊನೆಯುಸಿರಿನವರೆಗೂ ದುಡಿದರು.

ಪಕ್ಷದ ರಾಜಕೀಯ ಧೋರಣೆಯಲ್ಲಿ ಸಡಿಲತೆ ತರುವ ಎಲ್ಲಾ ಪ್ರಯತ್ನಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಹೋರಾಡಿದ ಬಿ.ಟಿ.ಆರ್. ಮಾರ್ಕ್ಸ್‌ವಾದ ಲೆನಿನ್‌ವಾದದ ಸಂರಕ್ಷಕರಾಗಿ ನಿಂತರು. ಬಲಪಂಥೀಯರು ಮತ್ತು ಎಡ ದುಸ್ಸಾಹಸವಾದಿಗಳ ವಿರುದ್ಧ ನಿರಂತರ ಹೋರಾಟ ನಡೆಸಿದರು. ಕಾರ್ಮಿಕ ವರ್ಗದ ಮೇಲೆ ಅತೀವ ಪ್ರೀತಿಯಿದ್ದ ಬಿ.ಟಿ.ಆರ್. ಕಾರ್ಮಿಕ ವರ್ಗದ ಅಂತರ್ರಾಷ್ಟ್ರೀಯತೆ ಮತ್ತು ಸಮಾಜವಾದವನ್ನು ಸದಾ ಎತ್ತಿಹಿಡಿದರು ಎಂದು ಪೊಲಿಟ್ ಬ್ಯೂರೋ ಹೇಳಿಕೆ ತಿಳಿಸುತ್ತದೆ.

ಕಾರ್ಮಿಕ ಚಳುವಳಿಯೊಂದಿಗೆ ವಿಶೇಷ ಸಂಬಂಧ ಬೆಳೆಸಿಕೊಂಡಿದ್ದ ಅವರು ಕೊನೆಯವರೆಗೂ ಆ ರಂಗದಲ್ಲಿ ದುಡಿದರು. ಮುಂಬೈಯಲ್ಲಿ ಗಿರಣಿ ಕಾರ್ಮಿಕರನ್ನು ಸಂಘಟಿಸಿದ ಬಿ.ಟಿ.ಆರ್. ಎ.ಐ.ಟಿ.ಯು.ಸಿ. ನಾಯಕರಾಗಿ ಬೆಳೆದರು. ೧೯೭೦ರಲ್ಲಿ ಸಿ.ಐ.ಟಿ.ಯು. ಸ್ಥಾಪನೆಯಾದಂದಿನಿಂದ ಕೊನೆಯವರೆಗೂ ಅವರು ಅದರ ಅಧ್ಯಕ್ಷರಾಗಿದ್ದರು. ಪ್ರತಿಭಾ ವಂತ ಬೌದ್ಧಿಕರೂ, ತಾತ್ವಿಕರೂ ಆಗಿದ್ದ ಬಿ.ಟಿ.ಆರ್. ತತ್ವ ಮತ್ತು ಆಚರಣೆ ಸಮ್ಮಾನರೂಪದಲ್ಲಿ ಮೇಳೈಸಿದ ಮುಖಂಡರಲ್ಲಿ ಅಗ್ರ ಪಂಕ್ತಿಯಲ್ಲಿದ್ದರು. ರೈತ ಕಾರ್ಮಿಕರ ಐಕ್ಯತೆ, ಜಾತಿಪದ್ಧತಿ ಹುಟ್ಟಿಸಿದ ಅಸಮಾನತೆ ಮತ್ತು ಸಾಮಾಜಿಕ ಅನಾಚಾರಗಳ ವಿರುದ್ಧ ಸ್ತ್ರೀಪುರುಷರ ಸಮಾನತೆ, ದುಡಿಯುವ ಮಹಿಳೆಯರ ಬೇಡಿಕೆಗಳನ್ನು ದೃಢವಾಗಿ ಎತ್ತಿ ಹಿಡಿದವರು ಅವರು. ಇವೆಲ್ಲಕ್ಕಿಂತ ಮಿಗಿಲಾಗಿ ದೇಶಾಭಿಮಾನದ ಮತ್ತು ಕಾರ್ಮಿಕ ವರ್ಗದ ಅಂತರ್ರಾಷ್ಟ್ರೀಯತೆಯನ್ನು ಅವರ ಎಲ್ಲಾ ಕೆಲಸ ಕಾರ್ಯಗಳಲ್ಲಿ ಕಾಣಬಹುದು ಎಂದು ಪಿ.ಬಿ. ಶ್ರದ್ಧಾಂಜಲಿ ಅರ್ಪಿಸಿದೆ.

ಬಿ.ಟಿ.ಆರ್. ಒಳ್ಳೆಯ ಬರಹಗಾರರು. ಅವರ ಹಲವಾರು ಪುಸ್ತಕಗಳು ಪ್ರಕಟವಾಗಿವೆ. ಮಾರ್ಕ್ಸ್‌ವಾದ ಲೆನಿನ್‌ವಾದದ ದೃಷ್ಟಿಕೋನದಿಂದ ಹಲವಾರು ವಿಷಯಗಳನ್ನು ವಿಶ್ಲೇಷಿಸಿರುವ ಈ ಕೃತಿಗಳು ಮುಂದಿನ ತಲೆಮಾರಿಗೊಂದು ದೊಡ್ಡ ಕೊಡುಗೆ, ಕಮ್ಯುನಿಸ್ಟರಿಗೆ ಪ್ರಗತಿಪರರಿಗೆ ಮಾರ್ಗದರ್ಶಕಗಳು ಎಂದು ಪಿ.ಬಿ. ಅಭಿಪ್ರಾಯ ಪಟ್ಟಿದೆ.

ಕಮ್ಯುನಿಸ್ಟ್ ಮುಂದಾಳು ಬಿ.ಟಿ.ಆರ್. ರವರದ್ದು ಪರಿಮಿತ ಅಗತ್ಯಗಳ ಸರಳ, ಆದರ್ಶ ಜೀವನ ಪಕ್ಷದ ಕಾರ್ಯಕರ್ತರೊಂದಿಗೆ, ಕಾರ್ಮಿಕರೊಂದಿಗೆ ಬೆರೆತು, ಅವರಿಂದ ಕಲಿಯುವ, ಅವರಿಗೆ ಕಲಿಸುವ ಪರಂಪರೆಯವರು.

ಕ್ರಾಂತಿಕಾರಿ ಚಟುವಟಿಕೆಗಳಿಗಾಗಿ ಒಂಭತ್ತು ವರ್ಷ ಜೈಲುವಾಸ, ನಾಲ್ಕು ವರ್ಷ ಭೂಗತ ಜೀವನ ನಡೆಸಿದ ಬಿ.ಟಿ.ಆರ್. ಬಿಕ್ಕಟ್ಟಿನ ಪರಿಸ್ಥಿತಿಗಳನ್ನು ಧೈರ್ಯದಿಂದ, ಉತ್ಸಾಹದಿಂದ ಎದುರಿಸಿದವರು, ಸಿ.ಪಿ.ಐ.(ಎಂ) ಮತ್ತು ಕಾರ್ಮಿಕ ಚಳುವಳಿಯನ್ನು ಕಟ್ಟಿ ಬೆಳೆಸುವುದರ ನೇತೃತ್ವ ನೀಡಿದವರು, ಅದಕ್ಕಾಗಿ ವೃದ್ಧಾಪ್ಯದಲ್ಲೂ ತರುಣರ ಉತ್ಸಾಹದಿಂದ ದುಡಿದವರು.

ಪಕ್ಷದ ಕಂಬವಾಗಿದ್ದರು, ಒಂದೊಂದು ಹಂತದಲ್ಲೂ, ಪರಿಸ್ಥಿತಿ ಬದಲಾವಣೆಯಾದಾಗಲೆಲ್ಲಾ ಸರಿಯಾದ ತಂತ್ರ ರೂಪಿಸುವಲ್ಲಿ, ಅಂತರ್ರಾಷ್ಟ್ರೀಯ ಬೆಳವಣಿಗೆಗಳ ಬಗ್ಗೆ ಕಾರ್ಮಿಕ ವರ್ಗದ ಸರಿಯಾದ ನಿಲುವನ್ನು ರೂಪಿಸುವುದರಲ್ಲಿ ದೊಡ್ಡ ಜವಾಬ್ದಾರಿ ವಹಿಸಿದರು. ಇವೆಲ್ಲದರಲ್ಲೂ ಅವರು ಶಕ್ತಿ ಕೇಂದ್ರವಾಗಿದ್ದರು ಎಂದು ಪಿ.ಬಿ. ಹೇಳಿಕೆ ವರ್ಣಿಸಿದೆ. ಮಾರ್ಕ್ಸ್‌ವಾದ-ಲೆನಿನ್‌ವಾದದ ಮೌಲಿಕತೆ, ಪರಿಶುದ್ಧತೆಯ ರಕ್ಷಣೆಯಲ್ಲಿ, ಪಕ್ಷದ ಪ್ರತಿಷ್ಠೆ ಬೆಳೆಸುವಲ್ಲಿ ವಿಶೇಷ ಆಸಕ್ತಿ ವಹಿಸಿದರು ಎಂದು ಹೇಳಿದೆ.

ಈಗಿನ ಘಟ್ಟದಲ್ಲಿ ಬಿ.ಟಿ.ಆರ್. ಅಗಲಿಕೆ ಪಕ್ಷಕ್ಕೆ ಎಡಆಂದೋಲನಕ್ಕೆ ದೊಡ್ಡ ಏಟು ಎಂದಿರುವ ಪೊಲಿಟ್ ಬ್ಯೂರೋ ಅವರ ಪತ್ನಿ ವಿಮಲಾ, ಮಗ ಉದಯ, ಸಹೋದರಿ ಅಹಲ್ಯಾ ರಂಗ್ನೇಕರ್ ಹಾಗೂ ಇತರ ಸಂಬಂಧಿಗಳಿಗೆ ಹಾರ್ದಿಕ ಸಂತಾಪ ವ್ಯಕ್ತಪಡಿಸುತ್ತಾ ಈ ಅಸಾಮಾನ್ಯ, ಹಿರಿಯ ಕ್ರಾಂತಿಕಾರಿಯ ಗೌರವಾರ್ಥ ಕೆಂಬಾವುಟವನ್ನು ತಗ್ಗಿಸಿ ನಮಿಸುತ್ತೇವೆ. ಈ ಮಹಾನ್ ಜೀವ ಬಿಟ್ಟು ಹೋದ ಕ್ರಾಂತಿಕಾರಿ ಕೆಲಸಗಳನ್ನು ಅತ್ಯಂತ ಐಕ್ಯತೆಯಿಂದ ಮುಂದುವರಿಸುವ ಪ್ರತಿಜ್ಞೆ ಮಾಡೋಣ ಎಂದು ಪಿ.ಬಿ. ಕರೆ ನೀಡಿದೆ.

ಕಾಮ್ರೇಡ್ ಬಿ.ಟಿ. ರಣದಿವೆಯವರಿಗೆ ಕೆಂಪು ನಮನ

ಸಿ. ನಂಜುಂಡಪ್ಪ

ಈಗ್ಗೆ ಮೂರು ದಶಕಗಳ ಹಿಂದೆ ನಾನು ವಿದ್ಯಾರ್ಥಿಯಾಗಿದ್ದಾಗ ಸುಪ್ರಸಿದ್ಧ ಕನ್ನಡ ಕಾದಂಬರಿಕಾರ ದಿವಂಗತ ಅ.ನ. ಕೃಷ್ಣರಾಯರು ಪ್ರಗತಿಶೀಲ ಸಾಹಿತ್ಯದ ಮೇಲೆ ಬರೆದ ಪ್ರಬಂಧಗಳಲ್ಲಿ ಮೊದಲ ಬಾರಿಗೆ ಬಿ.ಟಿ. ರಣದಿವೆಯವರ ಹೆಸರು ಪರಿಚಯವಾಯಿತು. ಅನಂತರ ಭಾರತದ ಕಾರ್ಮಿಕ ಚಳುವಳಿಯ ಕುರಿತು ಅಭ್ಯಾಸ ಮಾಡುವಾಗ ಮತ್ತೆ ಬಿ.ಟಿ. ರಣದಿವೆಯವರ ಹೆಸರು ಬಂದಿತು. ೧೯೭೦ರ ದಶಕದಲ್ಲಿ 'ಲಿಂಕ್' ವಾರಪತ್ರಿಕೆಯಲ್ಲಿ ಆಗಾಗ್ಗೆ ಬಿ.ಟಿ. ರಣದಿವೆಯವರ ಪ್ರಸ್ತಾಪವಿರುತ್ತಿದ್ದಿತು.

ಕಾಮ್ರೇಡ್ ಬಿ.ಟಿ. ರಣದಿವೆಯವರನ್ನು ನಾನು ಕಣ್ಣಾರೆ ನೋಡಿದುದು ೧೯೭೦ರ ಮೇ ತಿಂಗಳ ಕೊನೆಯ ವಾರದಲ್ಲಿ ಕಲ್ಕತ್ತದಲ್ಲಿ ಸಿಐಟಿಯು ಸ್ಥಾಪನಾ ಸಮ್ಮೇಳ ಸಮ್ಮೇಳನ ನಡೆದಾಗ. ಅನಂತರ ಸಿಪಿಐ(ಎಂ) ಒಂಬತ್ತನೆಯ ಅಧಿವೇಶನ ೧೯೭೨ರ ಜುಲೈ ತಿಂಗಳಲ್ಲಿ ಮಧುರೆಯಲ್ಲಿ ನಡೆದಾಗ. ತೀರಾ ಸಮೀಪದಲ್ಲಿ ಕುಳಿತು ಅವರು ಮಾತನಾಡುವುದನ್ನು ಕೇಳಿದುದು, ಅವರೊಂದಿಗೆ ಮಾತನಾಡಿದುದು ೧೯೭೨ರ ನವೆಂಬರ್ ತಿಂಗಳಲ್ಲಿ ಪಶ್ಚಿಮ ಬಂಗಾಳದ ಡಾರ್ಜಿಲಿಂಗಿನಲ್ಲಿ ಅಖಿಲ ಭಾರತ ಪ್ಲಾಂಟೇಷನ್ ಕಾರ್ಮಿಕರ ಒಕ್ಕೂಟದ ಸ್ಥಾಪನಾ ಸಮ್ಮೇಳನ ನಡೆದಾಗ. ಅದರ ನಂತರ ಹಲವಾರು ಬಾರಿ ಸಮ್ಮೇಳನಗಳಲ್ಲಿ, ಸಭೆಗಳಲ್ಲಿ, ಶಾಲೆಗಳಲ್ಲಿ ಅವರನ್ನು ಭೇಟಿ ಮಾಡಿದ್ದೇನೆ.

ಪಕ್ಷದ ೯ನೇ ಅಧಿವೇಶನದಿಂದ ೧೩ನೆಯ ಅಧಿವೇಶನದವರೆಗೆ ಪ್ರತಿಯೊಂದು ಅಧಿವೇಶನದಲ್ಲಿಯೂ ರಾಜಕೀಯ ನಿರ್ಣಯವನ್ನು ಕೇಂದ್ರ ಸಮಿತಿಯ ಪರವಾಗಿ ಬಿ.ಟಿ. ರಣದಿವೆಯರೇ ಮಂಡಿಸಿದ್ದಾರೆ ಮತ್ತು ರಾಜಕೀಯ ನಿರ್ಣಯದ ಮೇಲೆ ನಡೆದ ಚರ್ಚೆಗೆ ಕೇಂದ್ರ ಸಮಿತಿಯ ಪರವಾಗಿ ಅವರೇ ಉತ್ತರಿಸಿದ್ದಾರೆ. ಕೇಂದ್ರ ಪಾಠ ಶಾಲೆಗಳಲ್ಲಿ ಅವರು ಮಾಡುತ್ತಿದ್ದ ಪಾಠ ಗಳು: "ಜಾಗತಿಕ ಬಂಡವಾಳಶಾಹಿ ವ್ಯವಸ್ಥೆಯ ಬಿಕ್ಕಟ್ಟು ಮತ್ತು ಪ್ರಸಕ್ತ ವೈರುಧ್ಯಗಳು", "ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯಲ್ಲಿ ಬಲಪಂಥೀಯ ಪರಿಷ್ಕರಣವಾದದ ಹಾದಿ ಮತ್ತು ಎಡಪಂಥೀಯ ಸಾಹಸವಾದದ ದಾರಿ." ಕಾಂ. ಬಿ.ಟಿ. ರಣದಿವೆಯವರ ಭಾಷಣಗಳು, ಪಾಠ ಗಳು ಮತ್ತು ಬರಹ ಗಳು ನನ್ನ ಮೇಲೆ ಪ್ರಭಾವ ಬೀರಿವೆ.

ಸಿಐಟಿಯು ಸ್ಥಾಪನಾ ಸಮ್ಮೇಳನದಲ್ಲಿ ಅನೇಕ ಪ್ರತಿನಿಧಿಗಳು ಎಐಟಿಯುಸಿಯ ಡಾಂಗೆವಾದಿ ಮುಖಂಡತ್ವದ ಸುಧಾರಣಾವಾದಿ, ವರ್ಗ ಸಹಕಾರಿ ಧೋರಣೆಯನ್ನು ವಿರೋಧಿಸಿ ಮಾತನಾಡಿದರು. ಈ ಎಲ್ಲಾ ಭಾಷಣಗಳ ಪರಿಣಾಮ ಡಾಂಗೆವಾದಿಗಳನ್ನು ವಿರೋಧಿಸಲೆಂದೇ ಸಮ್ಮೇಳನವು ನಡೆಯುತ್ತಿದೆಯೇನೋ ಎಂಬ ಭಾವನೆಯನ್ನು ಹುಟ್ಟಿಸುತ್ತಿದ್ದಿತು. ಕಾರ್ಮಿಕರ ಶತ್ರು ಬಂಡವಾಳಗಾರರೆಂದೂ, ಡಾಂಗೆವಾದಿಗಳಲ್ಲವೆಂದೂ, ಕಾರ್ಮಿಕರ ನೇರಧಾಳಿ ಬಂಡವಾಳಗಾರರ ಮೇಲೆ ಇರಬೇಕೆ ಹೊರತು ಡಾಂಗೇವಾದಿಗಳ ಮೇಲೆ ಅಲ್ಲವೆಂದು ಬಿ.ಟಿ. ರಣದಿವೆಯವರು ಹೇಳಿದುದು ನನ್ನ ಮನಃ ಪಟಲದಲ್ಲಿ ಉಳಿಯಿತು.

ಡಾರ್ಜಿಲಿಂಗಿನಲ್ಲಿ ೧೯೭೨ರ ನವೆಂಬರಿನಲ್ಲಿ ಅಖಿಲ ಭಾರತ ಪ್ಲಾಂಟೇಷನ್ ಕಾರ್ಮಿಕರ ಒಕ್ಕೂಟದ ಸ್ಥಾಪನಾ ಸಮ್ಮೇಳನ ನಡೆಯುವಾಗ ಕಾಂ. ಮನೋರಂಜನರಾಯ್ ಮಂಡಿಸಿದ ವರದಿಯಲ್ಲಿ ಎಲ್ಲಾ ಪ್ಲಾಟೇಶನ್‌ಗಳನ್ನೂ ರಾಷ್ಟ್ರೀಕರಿಸಬೇಕೆಂಬ ಬೇಡಿಕೆಯಿದ್ದಿತು. ವರದಿಯನ್ನು ಚರ್ಚಿಸಿ ಮಾತನಾಡುವಾಗ ದಕ್ಷಿಣ ಭಾರತದಲ್ಲಿ ಕಾಫಿ, ರಬ್ಬರ್ ಮತ್ತು ಏಲಕ್ಕಿ ಪ್ಲಾಂಟೇಷನ್‌ಗಳಲ್ಲಿ ಐದು ಎಕರೆ ಅಥವಾ ಅದಕ್ಕಿಂತಲೂ ಕಡಿಮೆಯಿರುವ ತೋಟಗಳಿವೆಯೆಂದೂ, ಎಲ್ಲಾ ಪ್ಲಾಂಟೇಷನ್‌ಗಳನ್ನು ರಾಷ್ಟ್ರೀಕರಿಸಬೇಕು ಎಂಬ ಬೇಡಿಕೆಯು ಲಕ್ಷಾಂತರ ಸಣ್ಣ ಹಿಡುವಳಿದಾರರನ್ನು ಪ್ಲಾಂಟೇಷನ್ ಕಾರ್ಮಿಕರ ವಿರುದ್ಧವಾಗಿ ಎತ್ತಿಕಟ್ಟುವುದೆಂದೂ, ವಿದೇಶೀ ಬಂಡವಾಳಗಾರರ, ಸ್ವದೇಶಿ ಏಕಸ್ವಾಮ್ಯ ಬಂಡವಾಳಗಾರರು ಮತ್ತು ಹಿರಿಯ ಬಂಡವಾಳಗಾರರ ಒಡೆತನದಲ್ಲಿರುವ ಎಲ್ಲಾ ಪ್ಲಾಂಟೇಷನಗಳನ್ನು ಮತ್ತು ಎಲ್ಲಾ ದೊಡ್ಡ ಪ್ಲಾಂಟೇಷನ್ ಗಳನ್ನೂ ರಾಷ್ಟ್ರೀಕರಣ ಮಾಡಬೇಕೆಂದು ಆ ಬೇಡಿಕೆಯನ್ನು ತಿದ್ದುಪಡಿ ಮಾಡಬೇಕೆಂದು ನಾನು ವಾದಿಸಿದೆನು. ಬಿ.ಟಿ. ರಣದಿವೆಯವರು ತಮ್ಮ ಸಮಾರೋಪ ಭಾಷಣದಲ್ಲಿ ನನ್ನ ವಾದವನ್ನು ಎತ್ತಿ ಹಿಡಿದು ಸಮರ್ಥಿಸಿದರು. ಆದರೆ ಹಾಗೆ ಮಾತನಾಡುವಾಗ 'ಕರ್ನಾಟಕದ ಸಂಗಾತಿ' ಎಂದು ಹೇಳುವುದಕ್ಕೆ ಬದಲಾಗಿ 'ಕೇರಳದ ಸಂಗಾತಿ' ಎಂದು ಹೇಳಿಬಿಟ್ಟರು! ಸಮ್ಮೇಳನವು ನನ್ನ ತಿದ್ದುಪಡಿಯನ್ನು ಅಂಗೀಕರಿಸಿತು.

ದುರ್ಬಲ ವಿಭಾಗಗಳ ಕಾರ್ಮಿಕರ ಬಗ್ಗೆ

ಅವರು ಅಖಿಲ ಭಾರತ ಪ್ಲಾಂಟೇಷನ್ ಕಾರ್ಮಿಕರ ಒಕ್ಕೂಟದ ಎರಡನೆಯ ಸಮ್ಮೇಳನವೊಂದನ್ನು ಬಿಟ್ಟು ಉಳಿದ ನಾಲ್ಕು ಸಮ್ಮೇಳನಗಳಲ್ಲಿ ಮೊದಲಿನಿಂದ ಕೊನೆಯವರೆಗೆ ಉಪಸ್ಥಿತರಿದ್ದು ಮಾರ್ಗದರ್ಶನ ಕೊಟ್ಟರು.

ಹರಿಜನ, ಗಿರಿಜನರ ನಡುವಿನಿಂದ ಪಕ್ಷದ ಕಾರ್ಯಕರ್ತರು ಬೆಳೆದು ಬರಬೇಕೆಂದೂ, ಕೃಷಿ ಕೂಲಿಕಾರರು, ಪ್ಲಾಂಟೇಷನ್ ಕೆಲಸಗಾರರ ನಡುವಿನಿಂದ ಬೆಳೆದುಬಂದ ಪೂರ್ಣಕಾಲದ ಕಾರ್ಯಕರ್ತರಿಗೆ ಅವರು ಜೀವನ ನಿರ್ವಹಣೆಗೆ ಸಾಕಾಗುವಷ್ಟು ಸಂಭಾವನೆಯನ್ನು ಕೊಡಬೇಕೆಂದೂ, ಇತರ ವಿಭಾಗಗಳಿಂದ ಬಂದವರಿಗೆ ಇರುವಂತೆ ಅವರಿಗೆ ಸಂಪರ್ಕಗಳು ಇರುವುದಿಲ್ಲವೆಂದೂ ಬಿ.ಟಿ.ರಣದಿವೆ ಹೇಳುತ್ತಿದ್ದರು. ಸಮಾಜದ ಕೆಳಸ್ತರಗಳಿಂದ ಬರುವವರ ಬೆಳವಣಿಗೆಗೆ ಹೆಚ್ಚು ಗಮನ ಕೊಡಬೇಕು ಎನ್ನುತ್ತಿದ್ದರು.

ಕಾರ್ಮಿಕ ಸಂಘಗಳಲ್ಲಿ ಮಹಿಳಾ

ಪುಟ 6 ಕ್ಕೆ

ಸಿ.ಪಿ.ಐ(ಎಂ) ಭಾರತದ ಕಾರ್ಮಿಕ ವರ್ಗದ ಪಕ್ಷ. ಕಲ್ಕತ್ತ ಮತ್ತು ಮುಂಬಯಿ ಭಾರತದಲ್ಲಿ ಎರಡು ಅತಿ ದೊಡ್ಡ ಕೈಗಾರಿಕಾ ಕೇಂದ್ರಗಳು. ಇವುಗಳ ಪೈಕಿ ಒಂದರಲ್ಲಿ (ಕಲ್ಕತ್ತದಲ್ಲಿ) ಸಿ.ಐ.ಟಿ.ಯು. ಬೆಳೆದಿದೆ. ಪಶ್ಚಿಮ ಬಂಗಾಳದಲ್ಲಿ ಸಿ.ಪಿ.ಐ(ಎಂ) ನೇತೃತ್ವದ ಎಡರಂಗ ಸರ್ಕಾರ ೧೯೭೭ ರಿಂದ ಸತತವಾಗಿ ಅಧಿಕಾರದಲ್ಲಿದೆ. ಮುಂಬಯಿಯಲ್ಲಿಯೂ ಸಿ.ಐ.ಟಿ.ಯು. ಪ್ರಬಲವಾಗಿ ಬೆಳೆದಿದ್ದೇ ಆದರೆ ಭಾರತದಲ್ಲಿ ಸಿ.ಐ.ಟಿ.ಯು. ಒಂದು ಅಜೇಯ ಶಕ್ತಿಯಾಗುತ್ತದೆ. ಸ್ವಾತಂತ್ರೋತ್ತರ ಮುಂಬೈಯ ಕಾರ್ಮಿಕ ಚಳುವಳಿಯ ರಂಗದಲ್ಲಿನ ಬೆಳವಣಿಗೆಗಳ ಏಕೈಕ ಉದ್ದೇಶ ಸಮರ ಶೀಲ ಕ್ರಾಂತಿಕಾರಿ ಸಂಘಟನೆಯ ಬೆಳವಣಿಗೆಯನ್ನು ತಡೆಯುವುದು. ತತ್ಪರಿಣಾಮವಾಗಿ ಕಾರ್ಮಿಕ ವರ್ಗದ ರಾಜಕೀಯದ ಬೆಳವಣಿಗೆಯನ್ನು ತಡೆಯುವುದೇ ಆಗಿದೆ.

ಕೆಲಸದ ಹಕ್ಕಿನ ಹೋರಾಟ ನಿಜವಾದ ವಿಮುಕ್ತಿಯ ಹೋರಾಟ

ದೇಶದ ಕಾರ್ಮಿಕವರ್ಗದ ಮುಂದುವರಿದ ವಿಭಾಗಗಳೊಂದಿಗೆ ಒಂದು ವಿಶೇಷ ಸಂಬಂಧ ಬೆಳೆಸಿಕೊಂಡವರು ಬಿ.ಟಿ.ಆರ್. ಕಾರ್ಮಿಕರ, ನೌಕರರ ಯಾವುದೇ ಗಂಭೀರ ಸಮಾವೇಶ ಅವರಿಲ್ಲದೆ ಅಪೂರ್ಣವಾಗಿರುತ್ತಿತ್ತು. ಪ್ರತಿನಿಧಿಗಳು ಅವರ ಮಾತು ಕೇಳಲು ಉತ್ಸುಕತೆಯಿಂದ ಕಾಯುತ್ತಿದ್ದರು. ಏಕೆಂದರೆ ಪ್ರತಿಯೊಂದು ಬಾರಿಯೂ ಪ್ರತಿನಿಧಿಗಳಿಗೆ ಹೊಸದೆನಿಸುವ ವಿಚಾರ ತಿಳಿಸುವ ಪ್ರತಿಭೆ, ಅನುಭವ ಅವರದ್ದಾಗಿತ್ತು. ಇತ್ತೀಚೆಗೆ ದುರ್ಗಾಪುರದಲ್ಲಿ ನಡೆದ ಕೆಲಸದ ಹಕ್ಕಿನ ಸಮಾವೇಶದಂತೆ ಇನ್ನು ಯಾವುದೇ ಸಮಾವೇಶ, ಸಮ್ಮೇಳನಗಳಲ್ಲಿ ಬಿ.ಟಿ.ಆರ್.ರವರ ಪ್ರತಿಭಾಪೂರ್ಣ, ಅನುಭವಪೂರಿತ ಸ್ಫೂರ್ತಿದಾಯಕ ವಾಣಿ ಕೇಳಬರುವುದಿಲ್ಲ. ಆದರೆ ದುರ್ಗಾಪುರ ಸಮಾವೇಶಕ್ಕೆ ಅವರ ಲಿಖಿತ ಮಾರ್ಗದರ್ಶಕದ ಕೇಳುವ ಅವಕಾಶವಾದರೂ ಇತ್ತು. ಆ ಭಾಷಣದ ಕೆಲವು ಅಂಶಗಳು ಇಲ್ಲಿವೆ.

....ನಮ್ಮ ದೇಶದ ಕಾರ್ಮಿಕ ಆಂದೋಲನ ಕೂಡಾ ಈ ಸಮಸ್ಯೆಯನ್ನು ನಿರ್ಲಕ್ಷಿಸಿದೆ ಅದು ಮುಖ್ಯವಾಗಿ ಕೈಗಾರಿಕಾ ನಿರುದ್ಯೋಗ, ಅದರಲ್ಲಿ ರಿಟ್ರೆಂಚ್ ಆದ ಕಾರ್ಮಿಕರಿಗಷ್ಟೇ ಸೀಮಿತಗೊಂಡ ಪ್ರಶ್ನೆಯೆಂದಷ್ಟೇ ಕಂಡಿದೆ. ಇದು ಉದ್ಯೋಗಕ್ಕಾಗಿ ಉದ್ಯೋಗದ ಹಕ್ಕಿಗಾಗಿ ಹೋರಾಟವನ್ನು ದುರ್ಬಲಗೊಳಿಸಿತ್ತು. ಈ ಸನ್ನಿವೇಶದಲ್ಲಿ ಉಕ್ಕು ಕಾರ್ಮಿಕರ ಒಕ್ಕೂಟ ಈ ಸಮಾವೇಶ ನಡೆಸಲು ಮುಂದೆ ಬಂದಿರುವುದು ಮೆಚ್ಚತಕ್ಕ ವಿಷಯ.

ಕೆಲಸದ ಹಕ್ಕು ಕೇವಲ ಕೆಲಸದ ಭದ್ರತೆಯಷ್ಟೇ ಅಲ್ಲ. ಇದು ಮೂಲಭೂತ ಹಕ್ಕುಗಳಲ್ಲೆಲ್ಲಾ ಅತ್ಯಂತ ಮಹತ್ವದ ಹಕ್ಕು. ವಾಕ್‌ಸ್ವಾತಂತ್ರ, ಸಂಘಟನಾ ಸ್ವಾತಂತ್ರ, ಮತದಾನದ ಮತ್ತು ಸರಕಾರ ರಚಿಸುವ ಹಕ್ಕು ಇತ್ಯಾದಿ ಇತರ ಹಕ್ಕು ಗಳೆಲ್ಲಾ ಉದ್ಯೋಗದ ಹಕ್ಕಿಲ್ಲದೆ ಕೇವಲ ನಾಮಮಾತ್ರ ಹಕ್ಕುಗಳಾಗುತ್ತವೆ. ಈ ಎಲ್ಲಾ ಹಕ್ಕುಗಳು ಮಾಲಿಕರ ಉತ್ಪಾದನಾ ಸಾಧನೆಗಳ ಒಡೆಯರ ಕಾರ್ಖಾನೆಗಳ, ದಣಿಗಳ, ಧೈರ್ಯ, ಭೂಮಿಯ ಒಡೆಯರ ಇಚ್ಛೆಯ ಮೇಲೆ ಕಾರ್ಮಿಕರ, ಜನಸಾಮಾನ್ಯರ ಜೀವನದ ಅವಲಂಬನೆಯನ್ನು ಕೊನೆಗೊಳಿಸುವುದಿಲ್ಲ. ಶ್ರಮ ಜೀವಿ ನಿಜವಾಗಿಯೂ ಸ್ವತಂತ್ರನಾಗಬೇಕಾದರೆ, ಅವನು ಕೀಳು ಸ್ಥಾನಮಾನದ ಕೊಂದರೆಯಿಂದ ಮುಕ್ತನಾಗಬೇಕಾದರೆ ಪ್ರಭುತ್ವ ಆತನ ಕೆಲಸದ ಹಕ್ಕನ್ನು ಮಾನ್ಯ ಮಾಡಿದಾಗ ಮಾತ್ರ, ಯಾವುದೇ ಮೂಲಕ ಆತನ ಜೀವನ ಮತ್ತು ಕೆಲಸದೊಂದಿಗೆ ಆಟವಾಡಲು ಸಾಧ್ಯವಾಗದಿದ್ದಾಗ ಮಾತ್ರ ಸಾಧ್ಯ. ಈ ಹಕ್ಕು ಸಿಗುವಂತೆ ಮಾಡುವುದು ಹೇಗೆ ಸಾಧ್ಯ? ಮುಂತಾದ ಉತ್ಪಾದನಾ ಸಾಧನೆಗಳಿಗೆ ಸಂಬಂಧ ಪಟ್ಟಂತೆ ಸಮಾಜದ ಎಲ್ಲಾ ಸದಸ್ಯರಲ್ಲಿ, ಕಾರ್ಮಿಕರಲ್ಲಿ, ಶ್ರಮ ಜೀವಿಗಳಲ್ಲಿ ಸಮಾನತೆಯಿದ್ದಾಗ ಮಾತ್ರವೇ ಸಾಧ್ಯ. ಹೀಗಾಗಬೇಕಾದರೆ ಎಲ್ಲಾ ಉತ್ಪಾದನಾ ಸಾಧನೆಗಳ ಒಡೆತನವನ್ನು ಖಾಸಗಿ ಮಾಲಕರ, ಹಿಡಿಯಷ್ಟು ಬಂಡವಾಳ ಶಾಹಿಗಳ, ಗುತ್ತೇದಾರಿಗಳ ಹಿಡಿತದಿಂದ ತಪ್ಪಿಸಿ ಸಾಮಾಜಿಕ ಒಡೆತನಕ್ಕೆ ಒಳಪಡಿಸಬೇಕು. ಇದನ್ನು ಸಾಧ್ಯವಾಗಿಸಲು ರಾಜಕೀಯ ಶಕ್ತಿ ಜನಸಮೂಹಗಳ ಕೈಗೆ ಬರಬೇಕು. ಕಾರ್ಮಿಕ ವರ್ಗದ ನೇತೃತ್ವದಲ್ಲಿ ದುಡಿಯುವ ಜನರ ಒಂದು ಸರಕಾರ ಬರಬೇಕು.

ಆದ್ದರಿಂದಲೇ ಸಮಜವಾದಿ ದೇಶಗಳ ಸಂವಿಧಾನಗಳು ಮಾತ್ರವೇ ಕೆಲಸದ ಹಕ್ಕು ಮೂಲಭೂತಹಕ್ಕೆಂದು ಭರವಸೆ ನೀಡಿರುವುದು ಕೇವಲ ಆಕಸ್ಮಿಕವಲ್ಲ. ಬಂಡವಾಳ ಶಾಹಿ ದೇಶಗಳ ಅವುಗಳಲ್ಲಿ ಅತ್ಯಂತ ಶ್ರೀಮಂತ ದೇಶವಾದ ಅಮೇರಿಕಾದ ಸಂವಿಧಾನ ಕೂಡಾ ಕಾರ್ಮಿಕ ವರ್ಗಕ್ಕೆ, ದುಡಿಯುವ ಜನರಿಗೆ ಈ ಹಕ್ಕು ನೀಡಿಲ್ಲ.......

....ಸಮಸ್ತ ಕಾರ್ಮಿಕ ವರ್ಗ, ಉದ್ಯೋಗದಲ್ಲಿರಲಿ ಅಥವಾ ನಿರುದ್ಯೋಗಿಯಾಗಿರಲಿ ಎಲ್ಲರೂ ಮತ್ತು ದಾರಿದ್ರ್ಯಕ್ಕೆ ತಳ್ಳಲ್ಪಟ್ಟ ಗ್ರಾಮೀಣ ಜನಸಮೂಹಗಳು ಪರಸ್ಪರ ಒಗ್ಗಟ್ಟಾಗಿ ಕೆಲಸದ ಹಕ್ಕಿನ ಹೋರಾಟಕ್ಕೆ ಲಕ್ಷಾಂತರ ಜನರ ಬಲವನ್ನು ಕ್ರೋಢೀಕರಿಸುವುದು ಅನಿವಾರ್ಯ. ಈ ಹಕ್ಕುಗಳಿಸುವುದೆಂದರೆ ಕೆಲವು ಬಂಡವಾಳಗಳಿಗೆ ಜನರ ದಾಸ್ಯದಿಂದ ನಿಜವಾದ ವಿಮುಕ್ತಿ. ಮೊತ್ತಮೊದಲ ಬಾರಿಗೆ ಅವರು ಮತ್ತು ಅವರ ಕುಟುಂಬಗಳು ಸ್ವತಂತ್ರ ವಾತಾವರಣದಲ್ಲಿ ಅವರು ಉಸಿರಾಡಲು ಸಾಧ್ಯವಾಗುತ್ತದೆ.

ಕೆಲಸದ ಹಕ್ಕಿನ ಬಗ್ಗೆ ಪ್ರಚಾರ ನಡೆಸುವಾಗ ಸಮಸ್ತ ಕಾರ್ಮಿಕ ವರ್ಗ, ನಿರುದ್ಯೋಗಿ ಸಮೂಹ ಮತ್ತು ಗ್ರಾಮೀಣ ಜನಸುಮೂಹಗಳು ಸದ್ಯದ ಆರ್ಥಿಕ ವ್ಯವಸ್ಥೆಯಲ್ಲಿ ಆಸ್ತಿ ಸಂಬಂಧಗಳಲ್ಲಿ ಸಾಕಷ್ಟು ಬದಲಾವಣೆಗಳಿಗೂ ಒತ್ತಾಯಿಸಬೇಕು. ಏಕೆಂದರೆ ಇವಿಲ್ಲದೆ ಕೆಲಸದ ಹಕ್ಕಿಗೆ ಆಗತ್ಯ ಮಂಜೂರಿ ಸೃಷ್ಟಿಯಾಗಲಾರದು. ಈಗಿನ ಕೆಲವು ಕೈಗಳಲ್ಲಿ ಭೂಮಿಯ ಕೇಂದ್ರೀಕರಣದ ಸ್ಥಿತಿ ಬದಲಾಗದೆ, ಕೃಷಿ ಆಸ್ತಿ ಸಂಬಂಧಗಳನ್ನು ಆಮೂಲಾಗ್ರ ಬದಲಿಸುವ ಹೊಸ ಭೂಸುಧಾರಣಾ ಕ್ರಮಗಳಿಂದ ಭೂಹೀನರಲ್ಲಿ ವ್ಯಾಪಕ ಪ್ರಮಾಣದಲ್ಲಿ ಭೂಮಿ ಹಂಚಿಕೆಯಾಗದೆ ಕೆಲಸದ ಹಕ್ಕು ದೊರೆಯುವುದು ಸಾಧ್ಯವಿಲ್ಲ. ಅದೇ ರೀತಿ ತಮ್ಮ ಮನಬಂದಂತೆ ಕಾರ್ಮಿಕರವನ್ನು ನೇಮಿಸಿ ಕೊಳ್ಳುವ ತೆಗೆದುಹಾಕುವ ಹಕ್ಕುಳ್ಳ ಖಾಸಗೀ ಮಾಲಕರೇ ಉತ್ಪಾದನಾ ಸಾಧನಗಳನ್ನು ನಿರ್ವಹಿಸಲು ಬಿಟ್ಟರೆ ಕೂಡಾ ಕೆಲಸದಹಕ್ಕು ...

ಹೆಚ್ಚೆಚ್ಚು ಉದ್ದಿಮೆಗಳ ರಾಷ್ಟ್ರೀಕರಣ, ಕಾರ್ಮಿಕರ ಜತೆಗೂಡಿ ಅದರ ನಿರ್ವಹಣೆ, ಹೆಚ್ಚೆಚ್ಚು ಖಾಸಗಿ ಒಡೆತನದ ನಿರ್ಮೂಲನ-ಇವು ಕೆಲಸದ ಹಕ್ಕನ್ನು ಜಾರಿಗೊಳಿಸಲು ಆಧಾರಭೂತ ಅಂಶ.

ಇದರ ಜತೆಗೆ ಉದ್ಯೋಗಾವಕಾಶ ಹೆಚ್ಚಿಸಲು ತುರ್ತು ಕ್ರಮಗಳು, ಕೆಲಸಕ್ಕೆ ಮನಬಂದಂತೆ ನೇಮಿಸಿಕೊಳ್ಳುವ ತೆಗೆದುಹಾಕುವ ಮಾಲಕರ ಅಧಿಕಾರಿಗಳ ಮೇಲೆ ಮಿತಿ, ಉದ್ಯೋಗ ಯೋಜನೆಗಳು, ಕೆಲಸ ಪಡೆಯಲಾರದವರಿಗೆ ಪರಿಹಾರ ಈ ಬಗ್ಗೆ ಚಳುವಳಿ ನಡೆಯಬೇಕು.

ಈ ಎಲ್ಲಾ ತುರ್ತ ಬೇಡಿಕೆಗಳು ಮತ್ತು ಉದ್ಯೋಗದ ಹಕ್ಕಿನ ಚಳುವಳಿ ಉದ್ಯೋಗಸ್ಥರ, ನಿರುದ್ಯೋಗಿ ಕಾರ್ಮಿಕರ, ಗ್ರಾಮೀಣ, ನಗರ ಕಾರ್ಮಿಕರ, ಎಲ್ಲರ ಚಳುವಳಿಯಾಗಬೇಕು ಕಾರ್ಮಿಕವರ್ಗದ ಸಂಘಟಿತ ಬಲವನ್ನು ಪ್ರತಿನಿಧಿಸುವ ಕಾರ್ಮಿಕ ಸಂಘಗಳು ಇದರ ನೇತೃತ್ವ ವಹಿಸಬೇಕು. ಎಲ್ಲಾ ಕಾರ್ಮಿಕ ವಿಭಾಗಗಳು ಮತ್ತು ಮಧ್ಯಮ ವರ್ಗದ ನಿರುದ್ಯೋಗಿಗಳು ಒಂದು ಶಾಶ್ವತ ಸಂಘಟನೆ ರೂಪಿಸಿ ಈ ಸಮರವನ್ನು ಮುಂದೊಯ್ಯಬೇಕು.

ಎಲ್ಲಾ ವಿಭಾಗಗಳ ಯುವಜನರತ್ತ ವಿಶೇಷ ಗಮನ ನೀಡಬೇಕು. ಏಕೆಂದರೆ ಇವರು ಆಂದೋಲನದ ಅತ್ಯಂತ ಸಮರ ಧೀರ ಭಾಗ ಅವರು ಚೈತನ್ಯವನ್ನು ಒಮ್ಮೆ ಜಾಗ್ರತಗೊಳಿಸಿದರೆ ಸಂಘಟನೆಯಲ್ಲಿ ಅದ್ಭುತಗಳನ್ನೇ ಸಾಧಿಸಬಲ್ಲರು. ಈ ದಿಸೆಯಲ್ಲಿ ಎಸ್.ಎಫ್.ಐ., ಡಿ.ವೈ.ಎಫ್.ಐ. ಈಗಾಗಲೇ ಶ್ಲಾಘನೀಯ ಕೆಲಸ ಮಾಡಿದ್ದಾರೆ. ಕೆಲವೆಡೆ, ಉದಾಹರಣೆಗೆ ಕೇರಳದಲ್ಲಿ ಡಿ.ವೈ.ಎಫ್.ಐ ಮಾಡಿದಂತೆ, ಅವರು ನಿರುದ್ಯೋಗಿಗಳ ಪ್ರಶ್ನೆಯನ್ನು ಮೊದಲು ಎತ್ತಿ ಮುಂದಾದರು ಕಾರ್ಮಿಕ ಸಂಘಗಳು ...



★ ಕಾರ್ಮಿಕ ವರ್ಗಕ್ಕೆ ಮತ್ತೆ ... ಸ್ಥಾಪನಾ ಸಮ್ಮೇಳನದಲ್ಲಿ.

ಸಿ.ಪಿ.ಟಿ. ...


೧೯೭೦ ರಲ್ಲಿ ಸಂಸ್ಥಾಪನೆ ... ಬಿ.ಟಿ.ಆರ್. ರವರಿಂದ ಮಾರ್ಗದ ... ಪ್ರೀತಿಯ ಮುಂದಾಳು ಎಂ ... ನಿಧನದಿಂದ ದುಡಿಯುವ ವರ್ಗ ... ಕಾಲ ಅವರು ಕಾರ್ಮಿಕರ ... ಕಾರ್ಮಿಕರ ಬೇಡಿಕೆಗಳನ್ನು ಎತ್ತಿ ಹಿ ...

ಶಿಕ್ಷಣ ಮುಗಿಸಿ ಮುಂ ... ರೊಂದಿಗೆ ಆರಂಭಿಸಿದ ಕಾಂ. ... ಮುಂಬೈ ಗಿರಣಿ ಮುಷ್ಕರದ ... ಮುಂಬೈಯ ಎ.ಐ.ಟಿ.ಯು.ಸಿ. ... ಎರಡರಲ್ಲೂ ಸಮಾನ ಪ್ರತಿಭೆಯ ... ಸಿ.ಐ.ಟಿ.ಯು. ಹೇಳಿದೆ.

"ಎಡ ಪ್ರಜಾಪ್ರ ...

"ಸವಾಲನ್ನು ಎದುರಿಸುವ ಚ ... ಹೆಗಲ ಮೇಲಿದೆ. ಜನರಲ್ಲಿ ಈ ... ಪಡೆದ, ಸರಿಯಾದ ಕಣ್ಣೋಟ ... ಸಾಮೂಹಿಕ ಸಂಘಟನೆಗಳ ಹೆ ... ಪ್ರಜಾಪ್ರಭುತ್ವ ಶಕ್ತಿಗಳಿಗೆ ಪ್ರತಿಯೊ ... ಒಗ್ಗೂಡಿಸಿ, ಸನ್ನಿವೇಶದ ಮೇಲೆ ತ ... ಹೊಣೆ ನಿಭಾಯಿಸಲು ಸಾಧ್ಯವಾಗಬೇ ...

ಎಡಪಕ್ಷಗಳ ನೇತೃತ್ವ ವಹಿಸಿರು ... ಹೊಂದಿದೆ. ಪಂಜಾಬ್, ಅಸಾ ... ಕಾರ್ಯಕರ್ತರು ತಮ್ಮ ಧೀರ ... ಹೋರಾಟದಲ್ಲಿ ಮೇಲ್ಪಂಕ್ತಿ ... ತ್ಯಾಗ, ಬಲಿದಾನ, ಧೈರ್ಯ ... ಅವಶ್ಯಕತೆಯಿದೆ. ಸಿ.ಪಿ.ಐ.(ಎಂ)ನ ... ಜಾತ್ಯತೀತ ಶಕ್ತಿಗಳೊಂದಿಗೆ ವ್ಯಾಪಕ ... ಲೆನಿನ್‌ವಾದ ಚೈತನ್ಯದ ಮಾ ... ಈಡೇರಿಸುವುದು ಪಕ್ಷಕ್ಕೆ ಸಾಧ್ಯ.





ಪಥ ಪ್ರದರ್ಶನ ಸಿ.ಐ.ಟಿ.ಯು.

ಶ್ರದ್ಧಾಂಜಲಿ

ದ ಕೊನೆಯವರೆಗೂ ಅಧ್ಯಕ್ಷರಾಗಿದ್ದ
ಸಿ.ಐ.ಟಿ.ಯು., ಅವರು ಕಾರ್ಮಿಕರ
ಶ್ರದ್ಧಾಂಜಲಿ ಅರ್ಪಿಸಿದೆ. ಅವರ
ರದ ನಷ್ಟವಾಗಿದೆ. ಏಳು ದಶಕಗಳ
ಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿದರು.

ಕಾರ್ಮಿಕರನ್ನು ಸಂಘಟಿಸುವುದ
ವೆಯವರು ೧೯೨೯ ರ ಐತಿಹಾಸಿಕ
ಒಬ್ಬರಾಗಿದ್ದರು. ೧೯೩೦ ರಲ್ಲಿ
ವಾದರು. ತತ್ವ ಮತ್ತು ಆಚರಣೆ
ದ್ದ ತಾತ್ವಿಕವಾಗಿ ಬೆಳೆದರು ಎಂದು

ಶಕ್ತಿಗಳ ಚಾರಿತ್ರಿಕ

ಬ್ದಾರಿ ಎಡ ಪ್ರಜಾಪ್ರಭುತ್ವ ಶಕ್ತಿಗಳ
ಗ್ಗೆ ಹೆಚ್ಚುತ್ತಿರುವ ವಿಶ್ವಾಸ ರಕ್ಷಣೆ
ದರ್ಶನವಿರುವ, ತಮ್ಮ ನೇತೃತ್ವದ
ಶಕ್ತಿಯ ಬೆಂಬಲ ಪಡೆದ ಎಡ-
ಲ್ಲೂ ಎಲ್ಲಾ ಜಾತ್ಯತೀತ ಶಕ್ತಿಗಳನ್ನು
ಹಿಡಿತವನ್ನು ಎಂದೂ ಸಡಿಲಿಸದೆ ಈ

ಎಂ) ಇದರಲ್ಲಿ ವಿಶೇಷ ಜವಾಬ್ದಾರಿ
ರಾ, ಡಾರ್ಜಿಲಿಂಗ್‌ನಲ್ಲಿ ಆದರ
ಮೂಲಕ ರಾಷ್ಟ್ರೀಯ ಐಕ್ಯತೆಯ
ಮುಂಬರುವ ದಿನಗಳಲ್ಲಿ ವ್ಯಾಪಕ
ವೈಯುಕ್ತಿಕ ಸಾಹಸದ ಹೆಚ್ಚೆಚ್ಚು
ಮಾರ್ಗಕ್ಕೆ, ಎಡ ಐಕ್ಯತೆಯ,
ಮಾರ್ಗಕ್ಕೆ ಬದ್ಧರಾಗಿ, ಮಾರ್ಕ್ಸ್‌ವಾದ
ದ ಇತಿಹಾಸದ ಒತ್ತಾಸೆಗಳನ್ನು



ಜೀವನವೆಲ್ಲಾ ಹೋರಾಡಿ ಬೆಳಗಿದ ಚೇತನ

ವಿ.ಜೆ.ಕೆ. ನಾಯರ್

ದೇಶದ ಕಾರ್ಮಿಕ ಆಂದೋಲನದಲ್ಲಿ ಬಿ.ಟಿ.ಆರ್. ರವರದ್ದು ವಿಶಿಷ್ಟ ಪಾತ್ರ. ಆರು ದಶಕಗಳ ಪಾತ್ರ ಅದು. ಈ ಅರವತ್ತು ವರ್ಷಗಳಲ್ಲಿ ಅವರೆಂದೂ ಬಂಡವಾಳಶಾಹಿಯಿಂದ ಕಾರ್ಮಿಕರಿಗೆ ರಿಯಾಯ್ತಿ ಪಡೆದುಕೊಳ್ಳುವ ಮುಖಂಡನ ಪಾತ್ರ ವಹಿಸಲಿಲ್ಲ. ಈ ಉದ್ದೇಶಕ್ಕಾಗಿ ಯೂನಿಯನ್‌ನ ಸ್ಥಾನಮಾನ ಪಡೆದದ್ದಂತೂ ಇಲ್ಲದೇ ಇಲ್ಲ. ಇಪ್ಪತ್ತರ ದಶಕದ ಅಂತ್ಯ, ಮೂವತ್ತರ ದಶಕದ ಆರಂಭದ ತನ್ನ ಕಾರ್ಮಿಕ ಆಂದೋಲನದ ಚಟುವಟಿಕೆಗಳಲ್ಲಿ ಆ ಮೊದಲ ದಿನಗಳಲ್ಲಿ ಬಿಟ್ಟರೆ ಅವರೆಂದೂ ಯಾವುದೇ ಯೂನಿಯನ್ನಿನ ಪದಾಧಿಕಾರಿಯಾಗಲಿಲ್ಲ. ಈ ಮೊದಲ ದಿನಗಳಲ್ಲೂ ಕೂಡಾ ಪದಾಧಿಕಾರಿಯಾದದ್ದು ಆರ್ಥಿಕ ಚಟುವಟಿಕೆಗಳಿಗಾಗಿ ಮಾತ್ರವಲ್ಲ. ಅವರ ಪ್ರಕಾರ ಅದು ಮಾರ್ಕ್ಸ್‌ವಾದೀ ಚಿಂತನೆ ಹೇಳುವ ಸುಧಾರಣಾವಾದಿ ಕೆಲಸವಾಗಿತ್ತು. ತಾನು ಅತ್ಯುನ್ನತ ಸ್ಥಾನಗಳನ್ನು ಹೊಂದಿದ್ದ ಪಕ್ಷದ ಹೆಸರಿನಲ್ಲಿ ಸಾಮೂಹಿಕ ಚೌಕಾಸಿಗೆ ಮತ್ತು ಸುಧಾರಣಾವಾದಿ ಚಟುವಟಿಕೆ ಅವರಿಗೆ ಸೇರುತ್ತಿರಲಿಲ್ಲ. ಆದರೆ ತಾನು ನೇತೃತ್ವ ವಹಿಸಿದ ವರ್ಗವನ್ನು ಅವರು ಸದಾ ಕಾರ್ಯಾಚರಣೆ ಗಿಳಿಸಿದರು. ಇದರಲ್ಲಿ ಆರ್ಥಿಕ ಹೋರಾಟಗಳೂ ಸೇರಿದ್ದವು. ಯಾಕೆಂದರೆ ಈ ಆರ್ಥಿಕ ಹೋರಾಟಗಳಲ್ಲೇ ಜನಸಮೂಹಗಳಿಗೆ ವರ್ಗ ಹೋರಾಟದ ಪಾಠ ಸಿಗುವುದು. ಈ ಹೋರಾಟಗಳಲ್ಲೇ ಅವರು ಮತ್ತು ಅವರ ಸಂಗಾತಿಗಳು ಆಳುವ ವರ್ಗಗಳು ಮತ್ತು ಅವರ ಪ್ರಭುತ್ವಯಂತ್ರವನ್ನು ಬಯಲಿಗೆಳೆಯಲು ಸಾಧ್ಯವಾಗಿತ್ತು. ಈ ಕರ್ತವ್ಯಗಳನ್ನು ಅತ್ಯಂತ ವ್ಯಾಪಕ ಮಟ್ಟದಲ್ಲಿ ಮಾಡಲು ಅವರೆಂದೂ ಕಾರ್ಮಿಕ ಸಂಘಗಳಲ್ಲಿ ಯಾವುದೇ ಸ್ಥಾನಕ್ಕೆ ಅಂಟಿಕೊಳ್ಳಲಿಲ್ಲ. ತಾನು ಅಧ್ಯಕ್ಷನಾಗಿದ್ದ ಸಿ.ಐ.ಟಿ.ಯು. ಒಡನಾಟದ ಅವಧಿಯಾದ್ಯಂತ ಅವರು ಚುಕ್ಕಾಣಿ ಹಿಡಿದ ಮುಂದಾಳುವಾಗಿದ್ದರು. ಇದು ಸರಿಯಾಗಿಯೇ ಇತ್ತು. ಅವರ ನಿಧನದಿಂದ ತೆರವಾದ ಸ್ಥಾನ ಎಷ್ಟು ದೊಡ್ಡದೆಂದರೆ ಸದ್ಯಕ್ಕಂತೂ ಆಸ್ಥಾನಕ್ಕೆ ಬರುವ ಯಾರೇ ಆಗಲಿ ಬಿ.ಟಿ.ಆರ್. ರವರ ದೈತ್ಯ ಪ್ರತಿಮೆಯೆದುರು ಬಹಳ ಕುಬ್ಜರಾಗಿ ಕಾಣುತ್ತಾರೆ.

ಅವರು ಈ ಅಧ್ಯಕ್ಷ ಸ್ಥಾನ ಹೊಂದಿದ್ದದ್ದೂ ಅರವತ್ತು ದಶಕಗಳ ಕಾರ್ಮಿಕ ಆಂದೋಲನದ ಒಡನಾಟದಲ್ಲಿ ಕೊನೆಯ ಎರಡು ದಶಕಗಳಲ್ಲಿ ಮಾತ್ರ. ೩೦ ಮೇ ೧೯೭೦ ರಲ್ಲಿ ಕಲ್ಕತ್ತೆಯಲ್ಲಿ ಸಿ.ಐ.ಟಿ.ಯು. ಸ್ಥಾಪನೆಯಾದಾಗಿನಿಂದ ಕೊನೆಯ ಉಸಿರಿನವರೆಗೆ ಅವರು ಅಧ್ಯಕ್ಷರಾಗಿದ್ದರು. ಸಿ.ಐ.ಟಿ.ಯು.ವಿನ ಧೋರಣೆಗಳು, ಕಾರ್ಯಕ್ರಮ, ಸ್ಥಾಪನಾ ಸಮ್ಮೇಳನದಲ್ಲಿ ಅದು ರೂಪಿಸಿದ ಮಾರ್ಗ ಆದರ ಮೊದಲು ದೇಶದ ಕಾರ್ಮಿಕ ಆಂದೋಲನದ ಪ್ರಮುಖ ವಿಭಾಗಗಳ ಅನುಭವದಿಂದ ಮೂಡಿ ಬಂದವುಗಳಾಗಿದ್ದವು. ೧೯೭೦ರ ವೇಳೆಗಾಗಲೇ ಬಿ.ಟಿ.ಆರ್. ರ ಚರಿತ್ರೆಯ ನಾಲ್ಕು ದಶಕಗಳು ವರ್ಗ ಹೋರಾಟಕ್ಕೆ ಬದ್ಧವಾಗಿ ಇಡೀ ವರ್ಗವನ್ನೇ ಆವರಿಸಬಹುದಾದಷ್ಟು ವ್ಯಾಪಕವಾದ, ಕಾರ್ಮಿಕ ವರ್ಗ ತನ್ನ ದಾರಿಯನ್ನು ತಾನೇ ರೂಪಿಸಿ ಕೊಳ್ಳಲು, ವರ್ಗ ಹೋರಾಟದ ತಂತ್ರಗಳನ್ನು ಕರಗತ ಮಾಡಿ ಕೊಳ್ಳಲು, ಸುಧಾರಣಾ ವಾದಿಗಳು ಮತ್ತು ಸಾಹಸವಾದಿಗಳಿಂದ ಎಚ್ಚರದಿಂದಿರಲು ರೈತಾಪಿಯೊಂದಿಗೆ ನಿಕಟ ಸಖ್ಯತೆಯೊಂದಿಗೆ ರಾಜಕೀಯ ಅಧಿಕಾರ ಪಡೆಯಲು ಸಾಧ್ಯವಾಗುವಂತಹ ಪ್ರಜಾಸತ್ತಾತ್ಮಕವಾದ ಒಂದು ನಿಜವಾದ ಕಾರ್ಮಿಕ ವರ್ಗದ ಸಂಘಟನೆಯ ನೇತೃತ್ವ ವಹಿಸುವ ಕಷ್ಟಕರ ಪ್ರಯತ್ನಗಳ ಇತಿಹಾಸವಾಗಿತ್ತು. (ಈ ಅವಧಿಯ ಬಗ್ಗೆ ನಂತರ ವಿಶ್ಲೇಷಿಸೋಣ.

ಮೊದಲ ದಶಕ ಆರಂಭದ ಅವರ ಅವಧಿಯಾಗಿತ್ತು. ಆದರೆ ಅಲ್ಲಿಯೂ ನಂತರದ ವಿಚಾರಧಾರೆಯ ಕಾರ್ಯಾಚರಣೆಯ ಬೀಜಗಳನ್ನು ನೇರವಾಗಿ ಕಾಣಬಹುದು. ಚಟುವಟಿಕೆಗಳು, ಕಾರ್ಮಿಕರ ನೇರ ಸಂಘಟನೆಯ ದೃಷ್ಟಿಯಿಂದ ಅದು ಅತ್ಯಂತ ಸಮರ ಧೀರ ಘಟ್ಟವಾಗಿದ್ದರೆ ಮೂರು ದಶಕಗಳವರೆಗೆ ವ್ಯಾಪಿಸಿದ ಎರಡನೇ ಘಟ್ಟ ಪಕ್ಷದೊಳಗೆ ಹೋರಾಟದ, ತಪ್ಪುಗಳನ್ನು ಮಾಡಿದ, ಅವನ್ನು ಸರಿಪಡಿಸಿಕೊಂಡ, ಆದರೆ ಸದಾ ಕಾರ್ಮಿಕ ವರ್ಗದ ಹೋರಾಟಗಳ ಪರವಾಗಿ ನಿಂತ ಘಟ್ಟವಾಗಿತ್ತು. ಎರಡು ದಶಕಗಳ ಅಂತಿಮ ಘಟ್ಟ ಈ ಮಾರ್ಗ ದೇಶದ ಅತ್ಯಂತ ಪ್ರಭಾವಶಾಲಿ ಕಾರ್ಮಿಕ ವರ್ಗದ ಆಂದೋಲನವನ್ನು ಕಟ್ಟುವ ಕಾರ್ಯಾಚರಣೆಯಾಗಿ ಅರಳಿದ ಸಮಯ.

ಈಗ ಕಳೆದೆರಡು ದಶಕಗಳಲ್ಲಿ ವಿಕಸನಗೊಂಡ ಸ್ಪಷ್ಟ ಅಂಶಗಳನ್ನು ನೆನಪಿಸಿಕೊಳ್ಳೋಣ. ಇವು ಅವರು ಬಿಟ್ಟು ಹೋದ ಶಾಶ್ವತ ಪದಚಿಹ್ನೆಗಳು).

ಐಕ್ಯತೆ ಮತ್ತು ಹೋರಾಟ

ಈ ಮಹತ್ವದ ಘೋಷಣೆ ಸಿ.ಐ.ಟಿ.ಯು. ವಿನ ಹುಟ್ಟು ಗುರುತು. ಅದು ಹುಟ್ಟಿದ್ದೇ ತನ್ನ ವರ್ಗವನ್ನು ಒಗ್ಗಟ್ಟಾಗಿಸಲು ಮತ್ತು ಹೋರಾಡಲು. ಐಕ್ಯತೆಯ ಹೋರಾಟ, ಹೋರಾಟಕ್ಕಾಗಿ ಐಕ್ಯತೆ ಪರಸ್ಪರ ಭಿನ್ನ. ತನ್ನ ಅಸ್ತಿತ್ವದ ಈ ಚಿಕ್ಕ ಅವಧಿಯಲ್ಲೇ ಎ.ಐ.ಟಿ.ಯು.ಸಿ. ಒಡೆದವರೆಂಬ ಡಾಂಗೆವಾದಿಗಳ ಆಪಾದನೆಯನ್ನು ಹುಸಿಗೊಳಿಸಿದೆ. ಎ.ಐ.ಟಿ.ಯು.ಸಿ. ಯನ್ನು ಪ್ರಜಾಸತ್ತಾತ್ಮಕವಾಗಿ ನಡೆಸುವುದಿಲ್ಲವಾದರೆ, ಅದು ಹೋರಾಟಕ್ಕಾಗಿ ಇಲ್ಲದೆ ವರ್ಗಶಾಮೀಲಿಗಾಗಿ ಇದ್ದರೆ ಎ.ಐ.ಟಿ.ಯು.ಸಿ.ಯೊಳಗೆ ಐಕ್ಯತೆಯಿಂದಿರುವುದು ಬಿ.ಟಿ.ಆರ್. ಮತ್ತಿತರ ಸಂಗಾತಿಗಳಿಗೆ ಉದ್ದೇಶ ಹೀನವಾಗಿತ್ತು. ೧೯೬೭ರ ಸಮ್ಮೇಳನದಲ್ಲಿ ಕಾಂ. ಪಿ.ಆರ್. ಮಂಡಿಸಿದ ಮುಂಚೆ ಐಕ್ಯತಾ ವೇದಿಕೆ ಸಮಯದಲ್ಲಿ, ೧೯೬೨ ರಲ್ಲಿ ಚೀಣೀ ಆಕ್ರಮಣ ಎಂದು ಹೇಳಿಕೊಂಡು "ಭಾರತ ರಕ್ಷಣೆಗೆ ಕೈಗಾರಿಕಾ ಸಮರ ವಿರಾಮ" ಕ್ಕೆ ಸಹಿ ಹಾಕಿದ್ದು, ಬೋನಸ್ ಆಯೋಗದಲ್ಲಿ ಕಾರ್ಮಿಕ ಹಿತಾಸಕ್ತಿಗಳಿಗೆ ದ್ರೋಹ ಬಗೆದು ಕೊನೆಗೆ ಕಾಮ್ಗಿಕರ ಆದಾಯವನ್ನು ತೀವ್ರವಾಗಿ ಕಡಿತಗೊಳಿಸಿದ ಬೋನಸ್ ನೀಡಿಕೆ ಶಾಸನ ಬರುವಂತಾದ್ದು ಇವಕ್ಕೆ ಉದಾಹರಣೆಗಳು. ಎಲ್ಲಕ್ಕೂ ಮಿಗಿಲಾಗಿ ೧೯೬೭ ಹಾಗೂ ೧೯೬೯ರ ಸಂಯುಕ್ತ ರಂಗ ಸರಕಾರಗಳ ಸಮಯದಲ್ಲಿ ಶಕ್ತಿಶಾಲೀ ಕಾರ್ಮಿಕ ಆಂದೋಲನಕ್ಕೆ ನೇತೃತ್ವ ನೀಡದಕ್ಕಾಗಿ ಪಶ್ಚಿಮ ಬಂಗಾಳ ಟ್ರೇಡ್ ಯೂನಿಯನ್ ಕಾಂಗ್ರೆಸ್ ಕಮಿಟಿಯೊಂದಿಗೆ ಭಿನ್ನಾಭಿಪ್ರಾಯದಿಂದಾಗಿ ಎ.ಐ.ಟಿ.ಯು. ಸಿ. ಮುಖಂಡತ್ವ ಕಲ್ಕತ್ತೆಯಲ್ಲಿ ನಡೆಯಬೇಕಾಗಿದ್ದ ಅಖಿಲ ಭಾರತ ಟ್ರೇಡ್ ಯೂನಿಯನ್ ಸಮ್ಮೇಳನವನ್ನು ಗುಂಟೂರಿಗೆ ಕೊಂಡೊಯ್ಯಿತು. ಕಲ್ಕತ್ತೆಯ ಕೇಳಿಕೆಯನ್ನು ನಿರ್ಲಕ್ಷಿಸಿತು. ಇಲ್ಲ, ಕಲ್ಕತ್ತೆಯ ಸಮರಧೀರ ಕಾರ್ಮಿಕ ಆಂದೋಲನದಿಂದ ಓಡಿಹೋಯಿತು. ಕಾಂ. ಬಿ.ಟಿ.ಆರ್. ಮತ್ತಿತರ ಸಂಗಾತಿಗಳು ಗುಂಟೂರಿಗೆ ಹೋಗುವುದು ಬೇಡ ಎಂದು ನಿರ್ಧರಿಸಿದರು. ಮೇ ೧೯೭೦ ರಲಖಿಲ ಭಾರತ ಕಾರ್ಮಿಕ ಸಂಘಟನೆಯ ಸಮ್ಮೇಳನ ನಡೆಸಿದರು. ಇಲ್ಲಿಯೇ ಸಿ.ಐ.ಟಿ.ಯು. ಸ್ಥಾಪನೆಯಾಯಿತು.


ರಾಜಕೀಯ ಭೇದ ಭಾವವಿಲ್ಲದೆ ಎಲ್ಲಾ ಕಾರ್ಮಿಕ ಸಂಘಗಳ ಐಕ್ಯತೆಗೆ ಕರೆ ಸಿ.ಐ.ಟಿ.ಯು.ನ ಕರೆಯಾಗಿತ್ತು. ಬಿ.ಟಿ.ಆರ್. ಮಟ್ಟಿಗೆ ಶಬ್ದಶಃ ಪಾಲಿಸಬೇಕಾದ ಕರೆಯಾಗಿತ್ತು. ನಾಮ ಮಾತ್ರದ್ದಲ್ಲ. ಸಿ.ಪಿ.ಐ.(ಎಂ) ೧೦ನೇ ಮಹಾಧಿವೇಶನ ರಾಜಕೀಯ ಸಂಘಟನಾತ್ಮಕ ವರದಿಯಿಂದ ಕಂಡು ಬರುವಂತೆ ೧೯೭೪ ರ ವೇತನ ಸ್ತಂಭನ ವಿರೋಧಿ ಸಮಾವೇಶಗಳಲ್ಲಿ ಬಿ.ಎಂ.ಎಸ್. ಕೂಡಾ ಭಾಗವಹಿಸುತ್ತದೆಯೆಂಬ ಕಾರಣಕ್ಕೆ ಸಮಾವೇಶಗಳನ್ನು ಸ್ತಂಭನಗೊಳಿಸಿದ ಕೇಂದ್ರ ಸಮಿತಿಯ ತತ್ವ ನಿರ್ಣಯ. ಕೇಂದ್ರ ಸಮಿತಿಯ ಟೀಕೆಯಿಂದ ಕಾಂ. ಬಿ.ಟಿ.ಆರ್. ತಮ್ಮನ್ನು [illegible] ಸಮರ್ಥಿಸಿಕೊಂಡುದನ್ನು ನೋಡುವ ಅವಕಾಶ ಲೇಖಕನಿಗೆ ಸಿಕ್ಕಿತ್ತು. ಅವರಿಗೆ ಐಕ್ಯತೆಯ ಮಾರ್ಗ ಸಮಯ ಸಾಧಕತನದ ಮಾರ್ಗವಾಗಿರಲಿಲ್ಲ. ಇಂದಿರಾ ಗಾಂಧಿಯ ವೇತನ ಸ್ತಂಭನ ನೀತಿಯನ್ನು ವಿರೋಧಿಸುವುದು ಈ ಸಮಾವೇಶಗಳ ಗುರಿಯಾಗಿತ್ತು. ಅವನ್ನು ಮುಂದುವರೆಸಿದ್ದರೆ ಅವು ೧೯೭೫-೭೭ರ ತುರ್ತು ಪರಿಸ್ಥಿತಿಯ ಹಲ್ಲೆಗಳನ್ನು ಎದುರಿಸಲು ಕಾರ್ಮಿಕ ವರ್ಗವನ್ನು ಸಿದ್ಧಗೊಳಿಸುತ್ತಿದ್ದವು.

ಬಿ.ಟಿ.ಆರ್. ರವರಿಗೆ ಐಕ್ಯತೆಯ ಮಾರ್ಗ ಒಂದು ಫ್ಯಾಕ್ಟರಿಯಲ್ಲಿ ಎಲ್ಲಾ ಕಾರ್ಮಿಕ ಸಂಘಗಳ ಐಕ್ಯತೆ ಮಾತ್ರವೇ

ಪುಟ 7ಕ್ಕೆ



★ ಸಿ.ಐ.ಟಿ.ಯು. ೫ನೇ ರಾಜ್ಯ ಸಮ್ಮೇಳನದಲ್ಲಿ ರಾಜ್ಯದ ಸಿ.ಐ.ಟಿ.ಯು. ಮುಖಂಡರೊಂದಿಗೆ



ಸ್ವತಂತ್ರ ಭಾರತದ ನಾಲ್ಕು ದಶಕಗಳು

ಬಿ.ಟಿ.ಆರ್. ದೇಶದ ಪ್ರಮುಖ ಮಾರ್ಕ್ಸ್‌ವಾದೀ ಚಿಂತಕರಾಗಿದ್ದರು. ಭಾರತೀಯ ಸಮಾಜದ ವಿವಿಧ ಆಯಾಮಗಳ ಬಗ್ಗೆ ಅವರ ತೀಕ್ಷ್ಣ ವೈಜ್ಞಾನಿಕ ವಿಶ್ಲೇಷಣೆಗಳು ಸಿ.ಪಿ.ಐ.(ಎಂ) ಧೋರಣೆಯನ್ನು ರೂಪಿಸಿ ಅದನ್ನು ಒಂದು ಪ್ರಮುಖ ರಾಜಕೀಯ ಶಕ್ತಿಯಾಗಿ ಬೆಳೆಸುವಲ್ಲಿ ದೊಡ್ಡ ಪಾತ್ರವಹಿಸಿವೆ. ಸ್ವಾತಂತ್ರ್ಯಾನಂತರದ ಬೆಳವಣಿಗೆಗಳ ಬಗ್ಗೆ ಅವರ ವಿಶ್ಲೇಷಣಾತ್ಮಕ ಬರವಣಿಗೆಗಳ ಕೆಲವು ತುಣುಕುಗಳು ಇವು.

ಭಾರತದ ಸ್ವಾತಂತ್ರ್ಯ ನಿಸ್ಸಂಶಯವಾಗಿಯೂ ಭೂಮಿಯನ್ನು ನಡುಗಿಸಿದ ಒಂದು ಘಟನೆ ಅದು ಸಾಮ್ರಾಜ್ಯಶಾಹಿಗೆ; ಹಳೆಯ ವಸಾಹತುಶಾಹಿಗೆ ದೊಡ್ಡ ಹೊಡೆತ ನೀಡಿತು.

... ಯಶಸ್ಸುಗಳನ್ನು, ಸಾಧನೆಗಳನ್ನು, ಮೊದಲನೆಯದಾಗಿ ಫ್ಯಾಸಿಸಂ ವಿರೋಧಿ ಯುದ್ಧದಲ್ಲಿ ಸೋವಿಯೆತ್ ವಿಜಯ ವಿಶ್ವ ವರ್ಗ ಸಮತೋಲನದಲ್ಲಿ ತಂದ ಬದಲಾವಣೆ ತೆರೆದಿಟ್ಟ ಹೊಸ ಅವಕಾಶಗಳ ಹಿನ್ನೆಲೆಯಲ್ಲಿ ಪರಿಶೀಲಿಸಬೇಕು. ಎರಡನೆಯದಾಗಿ ಅದನ್ನು ಇತರ ನವವಿಮೋಚಿತ ದೇಶಗಳ ಅನುಭವ, ಸಾಧನೆಗಳು, ದೇಶದ ಹೊಸ ಆಳುವ ವರ್ಗಗಳ ವರ್ಗ ಮಿತಿಗಳಲ್ಲಿ ಪರಿಶೀಲಿಸಬೇಕು. ......

... ನಾಲ್ಕು ದಶಕಗಳ ಸ್ವಾತಂತ್ರ್ಯ ಭಾರತದ ವರ್ಗ ಪರಿಸ್ಥಿತಿಯಲ್ಲಿ ಗುಣಾತ್ಮಕ ಬದಲಾವಣೆಗಳನ್ನೇನೂ ತಂದಿಲ್ಲ. ಅಪೂರ್ಣ ಪ್ರಜಾಪ್ರಭುತ್ವ ಕ್ರಾಂತಿಪೂರ್ಣಗೊಳ್ಳಲು ನಾಲ್ಕು ದಶಕಕ್ಕೂ ಹೆಚ್ಚು ಕಾಲ ಬೇಕೆನ್ನುವುದು ಚಾರಿತ್ರಿಕವಾಗಿ ಅನಿವಾರ್ಯ ಆಗಿರಲಿಲ್ಲ. ಆದರೆ ರಾಷ್ಟ್ರೀಯ ವಿಮೋಚನಾ ಹೋರಾಟದಲ್ಲಿ ಕಮ್ಯುನಿಸ್ಟ್ ಆಂದೋಲನದ ದೌರ್ಬಲ್ಯ, ಆದರಿಂದಾಗಿ ಕ್ರಾಂತಿಗೆ ಮತ್ತು ವರ್ಗ ಅಧಿಕಾರ ಪಡೆಯಲು ನೇರ ಹೋರಾಟಕ್ಕೆ ಜನಸಮೂಹಗಳನ್ನು ಸಂಘಟಿಸುವಲ್ಲಿ ಅಸಮರ್ಥತೆಯಿಂದಾಗಿ ಈ ಪ್ರಕ್ರಿಯೆ ದೀರ್ಘಗೊಳ್ಳಬೇಕಾಯಿತು. ಪರಿಣಾಮವಾಗಿ, ಬೂರ್ಜ್ವಾ ಭೂಮಾಲೀಕ ಆಳ್ವಿಕೆ ಸಾಕಷ್ಟು ದೀರ್ಘಕಾಲ ಸ್ಥಿರತೆ ಕಂಡಿತು..

.... ದಿನಗಳಿಂದಲೇ ಹೊಸ ಆಳುವ ಜನಸಮೂಹಗಳ ಆಕಾಂಕ್ಷೆಗಳೊಂದಿಗೆ, ಅವರ ಪ್ರಜಾಪ್ರಭುತ್ವ ಒತ್ತಾಸೆಗಳೊಂದಿಗೆ, ಎಲ್ಲಕ್ಕೂ ಮಿಗಿಲಾಗಿ ಪಾಳೆಯಗಾರೀ ಶೋಷಣೆ ಕಿತ್ತೆಸೆಯುವ ರೈತಾಪಿ ಜನಸಮೂಹಗಳ ಒತ್ತಾಸೆಗಳೊಂದಿಗೆ ನೇರ ತಿಕ್ಕಾಟಕ್ಕಿಳಿದರು.

..... ಒಂದೊಂದಾಗಿ ಸಂವಿಧಾನದ ರೀತಿ ನೀತಿಗಳನ್ನು ಹಿಂದುಳಿದ ದೇಶದ ಬೂರ್ಜ್ವಾವರ್ಗಕ್ಕೆ ಅವು ಸೂಕ್ತವಾಗಿರಲಿಲ್ಲ ಎಂಬುದು ಸ್ಪಷ್ಟವಾಗಲಾರಂಭಿಸಿತು. ಸಂಪೂರ್ಣ ಪಾಳೆಯಗಾರಿ ವಿರೋಧಿ ಕ್ರಾಂತಿ ನಡೆದ ಪಶ್ಚಿಮದಿಂದ ಸಾಲ ತಂದ ಪ್ರಜಾಪ್ರಭುತ್ವದ ಹಂದರ ಭೂಮಾಲಿಕರೊಂದಿಗೆ ಕೆಲಸಮಾಡುತ್ತಿದ್ದವರಿಗೆ ಅಪಾಯ ತರಲಾರಂಭಿಸಿತು....


.... ಸಂವಿಧಾನ ಬೂರ್ಜ್ವಾ ಭೂಮಾಲೀಕ ಆಳ್ವಿಕೆಯ ನೇರ ಅಸ್ತ್ರವಾಗಿ ಬಳಕೆಯಾಗಲಾರಂಭಿಸಿತು........

... ಮೊದಲಿಗೆ ಹಲ್ಲೆ ಕಮ್ಯುನಿಸ್ಟರ ಮೇಲೆ, ಸಿ.ಪಿ.ಐ.(ಎಂ) ಮೇಲೆ ಕೇಂದ್ರೀಕೃತವಾಗಿತ್ತು. ಶೀಘ್ರವೇ ಬೂರ್ಜ್ವಾ ವಿರೋಧಿ ಪಕ್ಷಗಳ ಸಂವಿಧಾನ ಹಕ್ಕುಗಳ ಮೇಲೂ ಆಕ್ರಮಣ ಆರಂಭವಾಯಿತು.....

..ಭಾರತೀಯ ಪರಿಸ್ಥಿತಿಯಲ್ಲಿ ಬೂರ್ಜ್ವಾ ವಿರೋಧ ಪಕ್ಷಗಳ ಮಿತಿಗಳೂ ತೋರಿ ಬಂದವು. ನೇರವರ್ಗ ಪ್ರಶ್ನೆಗಳಿಂದ ತಪ್ಪಿಸಿಕೊಳ್ಳುವುದು, ಕಾಂಗ್ರೆಸ್‌ನ ಅಸ್ಪಷ್ಟ ಟೀಕೆ, ಕಾಂಗ್ರೆಸ್‌ನ ದುರಾಡಳಿತವನ್ನು ಬಯಲಿಗೆಳೆಯುವುದು ಮತ್ತು ಮೌಲ್ಯಾಧಾರಿತ ರಾಜಕಾರಣದ ಗೊಡ್ಡು ಹರಟೆ ಇವೇ ಈ ಪಕ್ಷಗಳ ರಾಜಕೀಯ. ತಮ್ಮ ಸೀಮಿತ ದೃಷ್ಟಿಕೋನದಿಂದಾಗಿ [illegible] ಬೂರ್ಜ್ವಾ ಭೂಮಾಲೀಕ ಕೂಟದ ಒಂದು ರಾಷ್ಟ್ರೀಯ ಪಕ್ಷದ [illegible]

ಕಾಮ್ರೇಡ್ ಬಿ.ಟಿ. ರಣದಿವೆಯವರಿಗೆ ಕೆಂಪು ನಮನ

★ ಲಾಲ್ ಸಲಾಂ! ವೀರವಂದನ! ರೆಡ್ ಸೆಲ್ಯೂಟ್



ಕಾರ್ಮಿಕ ವರ್ಗವು ರಂಗದ ನಾಯಕತ್ವವನ್ನು ವಹಿಸಲು ಇತರ ಜನ ವಿಭಾಗಗಳ ವಿಶ್ವಾಸವನ್ನುಗಳಿಸಲು ನಿರ್ವಹಿಸಬೇಕಾಗಿರುವ ಕರ್ತವ್ಯಗಳನ್ನು ಮಾಡಲು ಕಾರ್ಮಿಕ ವರ್ಗದ ಪ್ರಜ್ಞೆಯನ್ನು ಏರಿಸುವುದು ಬಹಳ ಅಗತ್ಯ. ಈ ವಿಚಾರಗಳನ್ನು ಒಳಗೊಂಡ ಒಂದು ದಸ್ತಾವೇಜನ್ನು ಬಿ.ಟಿ. ರಣದಿವೆಯರು ಸಿದ್ಧಪಡಿಸಿ ಕೇಂದ್ರ ಸಮಿತಿಯು ಚರ್ಚಿಸಿ ಪಕ್ಷದ ರಾಜ್ಯ ಸಮಿತಿಗಳಿಗೆ ಚರ್ಚೆಗಾಗಿ ಕಳುಹಿಸಿ ಕೊಟ್ಟಿತು. ತರುವಾಯ ಅದನ್ನು ಕೇಂದ್ರ ಸಮಿತಿಯು ತಿದ್ದಿ ಪೂರ್ಣಗೊಳಿಸಿ ೧೯೬೭ರ ಸೆಪ್ಟೆಂಬರನಲ್ಲಿ "'ಕಾರ್ಮಿಕ ರಂಗದಲ್ಲಿ ಪಕ್ಷದ ಕರ್ತವ್ಯಗಳು" ಎಂಬ ನಿರ್ಣಯವನ್ನಾಗಿ ಪ್ರಕಟಿಸಿತು.

ವಿಭಿನ್ನ ರಾಜಕೀಯ ವಿಚಾರ ಧಾರೆಗಳ ನಡುವೆ ಹರಿದು ಹಂಚಿ ಹೋಗಿರುವ ಕಾರ್ಮಿಕ ವರ್ಗವನ್ನು ಒಂದುಗೂಡಿಸಲು ಹೋರಾಟ ನಡೆಯಬೇಕು. ಸಿಐಟಿಯು ಜನನದೊಂದಿಗೇನೇ ಕಾರ್ಮಿಕ ಸಂಘಗಳ ಐಕ್ಯತೆಗಾಗಿ ಹೋರಾಟವು ಪ್ರಾರಂಭವಾಯಿತು. ೧೯೭೪ರಲ್ಲಿ ನಡೆದ ರೈಲ್ವೆ ಕಾರ್ಮಿಕರ ಚಾರಿತ್ರಿಕ ಮುಷ್ಕರ ಈ ಹೋರಾಟದ ಹಾದಿಯಲ್ಲಿ ಒಂದು ಮೈಲಿಗಲ್ಲು. ೧೯೭೮ರಲ್ಲಿ ನವದೆಹಲಿಯಲ್ಲಿ "ಕೈಗಾರಿಕಾ ಬಾಂಧವ್ಯಗಳ ಮಸೂದೆ"ಯ ವಿರುದ್ಧವಾಗಿ ನಡೆದ ರಾಷ್ಟ್ರೀಯ ಸಮಾವೇಶವು 'ಕಾರ್ಮಿಕ ಸಂಘಗಳ ರಾಷ್ಟ್ರೀಯ ಆಂದೋಳನ ಸಮಿತಿ'ಯನ್ನು ರಚಿಸಿತು. ೧೯೮೧ರ ಜೂನಿನಲ್ಲಿ ಮುಂಬಯಿಯಲ್ಲಿ ನಡೆದ ಅಖಿಲ ಭಾರತ ಕಾರ್ಮಿಕ ಸಂಘಗಳ ಸಮಾವೇಶವು ೧೯೭೮ರಲ್ಲಿ ನವದೆಹಲಿಯಲ್ಲಿ ರಚಿಸಲ್ಪಟ್ಟ 'ಕಾರ್ಮಿಕ ಸಂಘಗಳ ರಾಷ್ಟ್ರೀಯ ಆಂದೋಳನ ಸಮಿತಿ'ಯನ್ನು ಪುನರುಜ್ಜೀವನಗೊಳಿಸಿ ಪುನಶ್ಚೇತನಗೊಳಿಸಿತು.

೧೯೭೯ರ ಏಪ್ರಿಲ್‌ನಲ್ಲಿ ಮದರಾಸಿನಲ್ಲಿ ನಡೆದ ಸಿಐಟಿಯುವಿನ ನಾಲ್ಕನೆಯ ಸಮ್ಮೇಳನವು ಕೇಂದ್ರ ಸರ್ಕಾರವು ಅನುಸರಿಸುವ ನೀತಿಗೆ ಪರ್ಯಾಯವಾಗಿ ದೇಶದ ಕಾರ್ಮಿಕ ವರ್ಗವು ತನ್ನದೇ ಆದ ನೀತಿಯನ್ನು ರೂಪಿಸಲು, ಎಲ್ಲಾ ಕಾರ್ಮಿಕ ಸಂಘಗಳ ವೇದಿಕೆಯೊಂದರ ಅವಶ್ಯಕತೆಯನ್ನು ಮನಗಂಡು ಕಾರ್ಮಿಕ ಸಂಘಗಳು 'ಸಂಯುಕ್ತ ಕೂಟ'ದ (ಕಾನ್‌ಫೆಡರೇಷನ್) ರಚನೆಗೆ ಕರೆ ಕೊಟ್ಟಿತು. ೧೯೮೩ರಲ್ಲಿ ಕಾನ್‌ಪುರದಲ್ಲಿ ನಡೆದ ಐದನೆಯ ಸಮ್ಮೇಳನ ೧೯೮೭ರಲ್ಲಿ ಮುಂಬಯಿಯಲ್ಲಿ ನಡೆದ ಆರನೆಯ ಸಮ್ಮೇಳನ ಕಾರ್ಮಿಕ ಸಂಘಗಳ 'ಸಂಯುಕ್ತಕೂಟ'ದ ರಚನೆಯ ಕರೆಯನ್ನು ಪುನರುಚ್ಚರಿಸಿದವು.

ಮುಂದುವರಿಯುವುದು



★ ಬಿ.ಟಿ.ಆರ್. ರವರಿಗೆ ಕೊನೆಯ ಮಹಾಧಿವೇಶನವಾದ ೧೩ನೇ ಮಹಾಧಿವೇಶನಕ್ಕೆ ಆಗಮಿಸಿದಾಗ [illegible]

ಪುಟ ೪ ರಿಂದ

ಕಾರ್ಮಿಕರು ಸಂಘಗಳ ಕಾರ್ಯಕರ್ತೆಯರಾಗಿ, ನಾಯಕಿಯರಾಗಿ ಬೆಳೆದು ಮೇಲೆ ಬರಬೇಕು ಎಂಬುದನ್ನು, ಕಾರ್ಮಿಕ ಸಂಘಗಳ ಮಹಿಳಾ ಕಾರ್ಮಿಕರ ವಿಶಿಷ್ಟ ಸಮಸ್ಯೆಗಳಿಗೆ ವಿಶೇಷ ಗಮನವನ್ನು ಕೊಡಬೇಕು ಎಂಬುದನ್ನು ಬಿ.ಟಿ. ರಣದಿವೆಯವರು ಪ್ರತಿಯೊಂದು ಸಿಐಟಿಯು ಸಭೆ, ಸಮ್ಮೇಳನಗಳಲ್ಲಿ ಹೇಳುತ್ತಿದ್ದರು. ೧೯೭೯ರ ಏಪ್ರಿಲ್‌ನಲ್ಲಿ ಸಿಐಟಿಯುವಿನ ನಾಲ್ಕನೆಯ ಅಖಿಲ ಭಾರತ ಸಮ್ಮೇಳನದ ಮುಂಚಿನ ಎರಡು ದಿವಸ ಮದರಾಸಿನಲ್ಲಿ ದುಡಿಯುವ ಮಹಿಳೆಯರ ರಾಷ್ಟ್ರೀಯ ಸಮಾವೇಶವು ನಡೆಯುವ ಎರಡು ತಿಂಗಳ ಮೊದಲೇ ೧೯೭೯ರ ಫೆಬ್ರವರಿಯಲ್ಲಿ ಮಂಗಳೂರಿನಲ್ಲಿ ದುಡಿಯುವ ಮಹಿಳೆಯರ ಕರ್ನಾಟಕ ರಾಜ್ಯ ಸಮಾವೇಶವು ನಡೆದುದು ಬಿ.ಟಿ. ರಣದಿವೆಯವರ ಗಮನವನ್ನು ಸೆಳೆಯಿತು. ಅನಂತರ ಸಿಐಟಿಯು ಕರ್ನಾಟಕ ರಾಜ್ಯ ಸಮ್ಮೇಳನಗಳು ೧೯೮೪ರಲ್ಲಿ ಹರಿಹರದಲ್ಲಿ, ೧೯೮೬ರಲ್ಲಿ ಮಂಗಳೂರಲ್ಲಿ, ೧೯೮೯ರಲ್ಲಿ ಹುಬ್ಬಳ್ಳಿಯಲ್ಲಿ ನಡೆದಾಗ ಈ ಮೂರೂ ಸಮ್ಮೇಳನಗಳಿಗೆ ಅವರು ಬಂದು ಮಾರ್ಗದರ್ಶನ ಕೊಟ್ಟರು.

ಸಿಪಿಐ(ಎಂ) ಮತ್ತು ಸಿಪಿಐಗೆ ಇರುವ ಮೂಲ ಭಿನ್ನಾಭಿಪ್ರಾಯಗಳ ಪೈಕಿ ಭಾರತದ ಕ್ರಾಂತಿಯ ನಾಯಕತ್ವವನ್ನು ಕುರಿತಾದುದು. ಜನತಾ ಪ್ರಜಾಪ್ರಭುತ್ವ ರಂಗದ ಮತ್ತು ಜನತಾ ಪ್ರಜಾಪ್ರಭುತ್ವ ಕ್ರಾಂತಿಯ ನಾಯಕ ಪಾತ್ರವನ್ನು ಕಾರ್ಮಿಕ ವರ್ಗವು ವಹಿಸುತ್ತದೆ ಎಂಬುದರ ಕುರಿತು ಬಿ.ಟಿ. ರಣದಿವೆಯವರಿಗೆ ಅಚಲವಾದ ವಿಶ್ವಾಸವಿದ್ದಿತು.

ಕಾರ್ಮಿಕ ಐಕ್ಯತೆ

ಜನತಾ ಪ್ರಜಾಪ್ರಭುತ್ವ ರಂಗದ ನಾಯಕತ್ವ ವಹಿಸಲು ಕಾರ್ಮಿಕ ವರ್ಗವನ್ನು ಐಕ್ಯಗೊಳಿಸುವುದು, ಮತ್ತು



★ ೧೩ ನೇ ರಾಜ್ಯ ಸಮ್ಮೇಳನದಲ್ಲಿ ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡುತ್ತಿದ್ದಾರೆ.

"...ಭರವಸೆಯನ್ನು ಹುಸಿಗೊಳಿಸದೆ ಮುನ್ನಡೆಯಿರಿ"

ಬಿ.ಟಿ.ಆರ್ ಪಕ್ಷದ ೧೩ ನೇ ರಾಜ್ಯ ಸಮ್ಮೇಳನದಾದ್ಯಂತ ಹಾಜರಿದ್ದು ಚರ್ಚೆಯನ್ನು ಆಲಿಸಿದರು. ಕೊನೆಯ ದಿವ ಸಮ್ಮೇಳನ ಪ್ರತಿನಿಧಿಗಳನ್ನುದ್ದೇಶಿಸಿ ಹೇಳಿದ ಕೆಲವು ಮಾತುಗಳನ್ನು ನೆನಪಿಸಿಕೊಳ್ಳೋಣ.

ಕರ್ನಾಟಕದಿಂದ ಹತ್ತುಸಾವಿರ ಜನ ನಡುಗುವ ಚಳಿಯಲ್ಲಿ ದೆಹಲಿಗೆ ಬಂದದ್ದು ಕೇವಲ ನಮ್ಮ ಮನವಿಯಿಂದಾಗಿ ಅಲ್ಲ. ಜನಸಮೂಹಗಳಲ್ಲಿ ಆಗಲೇ ಚಲನೆ ಆರಂಭವಾಗಿರುವುದರಿಂದ ಈ ಸಂಗತಿ ಅರಿಯದಿದ್ದರೆ ನಾವು ಇದರಿಂದ ಸರಿಯಾದ ಪಾಠ ಕಲಿಯಲು ಸಾಧ್ಯವಿಲ್ಲ. ನೀವು ಒಳ್ಳೆಯ ಕೆಲಸ ಮಾಡಿದ್ದೀರಿ. ಆದರೆ ಸಾಮೂಹಿಕ ಅಸಂತೃಪ್ತಿ ಹೋಲಿಸಿದರೆ ನೀವು ಮಾಡಬೇಕಾದುದು ಇನ್ನೂ ಬಹಳಷ್ಟಿದೆ.....

ನಮ್ಮ ಪಾಳೆಯಗಾರಿ-ವಿರೋಧಿ, ಸಾಮ್ರಾಜ್ಯಶಾಹಿ ವಿರೋಧಿ ಗುರಿಗಳನ್ನು, ವರ್ಗ ಸಮತೋಲನವನ್ನು ಕಾರ್ಮಿಕವರ್ಗದ ಪರವಾಗಿ ಬದಲಿಸುವ ಕರ್ತವ್ಯವನ್ನು ಮರೆಯುವಂತಿಲ್ಲ.......

ಕಳೆದ ೩೦-೪೦ ವರ್ಷಗಳಲ್ಲಿ ಸಾವಿರಾರು ಮಹಿಳಾ ಕಾರ್ಮಿಕರು ಪಕ್ಷಕ್ಕೆ ವಿಧೇಯರಾಗಿ ಹೋರಾಡಿದ್ದರೂ ಈ ಸಮ್ಮೇಳನದಲ್ಲಿ ಕೇವಲ ಹತ್ತು ಮಹಿಳಾ ಪ್ರತಿನಿಧಿಗಳಿದ್ದಾರೆ. ಇದರಲ್ಲಿ ನಾವೆಲ್ಲರೂ ತಪ್ಪಿತಸ್ಥರು. ಪಾಳೆಯಗಾರಿ ಮೌಲ್ಯಗಳಿಂದ ಹೊರಬರದೆ ಮಾರ್ಕ್ಸ್‌ವಾದಿಗಳಾಗುವುದು ಸಾಧ್ಯವಿಲ್ಲ......

ಪಾರ್ಟಿ ಶಾಲೆಗಳ ಬೇಡಿಕೆ ಸರಿಯಾದದ್ದೇ. ಆದರೆ ಕೇವಲ ಪಾರ್ಟಿ ತರಗತಿಗಳಿಂದಲೇ ಕಮ್ಯುನಿಸ್ಟ್‌ರಾಗುವುದು ಸಾಧ್ಯವಿಲ್ಲ. ರಾಜ್ಯ ಸಮಿತಿ ಸದಸ್ಯರು, ಸೆಕ್ರೆಟಾರಿಯೇಟ್ ಸದಸ್ಯರು, ಪಾಲಿಟ್ ಬ್ಯುರೋ ಸದಸ್ಯರು ಸರ್ವಜ್ಞಾನ ಸಂಪನ್ನವಾದ ಒಂದು ಹೊಸ ಬ್ರಾಹ್ಮಣ ಕಮ್ಯುನಿಸ್ಟ್ ವರ್ಗ, ಅವರ ಉಪದೇಶ ಪಡೆದು ಮೋಕ್ಷಗಳಿಸಬಹುದು ಎಂದು ಹಲವರು ಭಾವಿಸಿದಂತಿದೆ. ಪಾರ್ಟಿ ಶಾಲೆ ನೆರವು ನೀಡಬಹುದಷ್ಟೆ. ಜತೆಗೆ ಸ್ವಂತ ಅಧ್ಯಯನದ ಆಕಾಂಕ್ಷೆಯಿಲ್ಲದಿದ್ದರೆ ಯಾರೂ ಕಮ್ಯುನಿಸ್ಟ್‌ನಾಗುವುದು ಸಾಧ್ಯವಿಲ್ಲ.......

ಕರ್ನಾಟಕದಲ್ಲಿ ಅಪಾರ ತ್ಯಾಗದ ಪರಂಪರೆಯುಳ್ಳ ಮತ್ತು ಎಲ್ಲಾ ರೀತಿಯ ಸಮಯಸಾಧಕತನದ ವಿರುದ್ಧ ಹೋರಾಟದ ಪರಂಪರೆಯುಳ್ಳ ಪಕ್ಷ ಜನತೆಯ ಹೆಚ್ಚುತ್ತಿರುವ ಅಸಂತೃಪ್ತಿಗೆ ದನಿ ನೀಡಿ ಜನಸಮೂಹಗಳ ನಡುವೆ ಇದುವರೆಗಿಂತ ಹೆಚ್ಚು ಉತ್ತಮ ಸ್ಥಾನ ಪಡೆಯಲು ಸಾಧ್ಯ ಎಂಬ ಪೂರ್ಣ ಭರವಸೆ ನನಗಿದೆ. ನಮ್ಮ ರಾಜಕೀಯ ಲೈನು ಜನತೆಯ ಅಸಂತೃಪ್ತಿಯೊಂದಿಗೆ ಮೇಳವಿಸಿರುವಾಗ ನಾವು ಅಗಾಧ ಮುನ್ನಡೆ ಸಾಧಿಸಿ ಒಂದು ದೊಡ್ಡ ಸಾಮೂಹಿಕ ಪಕ್ಷವಾಗುವಲ್ಲಿ ಯಾವ ತೊಂದರೆಯೂ ಇರಲಾರದು. ಹೆಚ್ಚೆಚ್ಚು ಜನ ವಿಭಾಗಗಳು ನಮ್ಮ ಪಕ್ಷದ ಮೇಲೆ ಇಡುತ್ತಿರುವ ಭರವಸೆಯನ್ನು ಹುಸಿಗೊಳಿಸದೆ ಮುನ್ನಡೆಯಿರಿ......

೩೦-೧೧-೧೯೮೮



ಪುಟ 5 ರಿಂದ

ಜೀವನವೆಲ್ಲಾ ಹೋರಾಡಿ ಬೆಳಗಿದ ಚೇತನ

ಆಗಿರಲಿಲ್ಲ. ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳ ಐಕ್ಯತೆ ಕೂಡಾ ಆಗಿರಲಿಲ್ಲ. ಅಂತಿಮ ಗುರಿ ವರ್ಗ ಐಕ್ಯತೆ ಮತ್ತು ಹೋರಾಟ. ಬಿ.ಟಿ.ಆರ್. ಗೆ ಇಡೀ ವರ್ಗದ ಐಕ್ಯತೆ ಪ್ರಮುಖ ಅಂಶವಾಗಿತ್ತು. ಆದ್ದರಿಂದಲೇ ಅವರು ಸಂಘಟಿತ ಕಾರ್ಮಿಕ ವರ್ಗದ ಅಸಂಘಟಿತ ಕಾರ್ಮಿಕ ರೊಂದಿಗೆ ಐಕ್ಯತೆಯ ಮೇಲೆ, ಯುವ ಕಾರ್ಮಿಕರನ್ನು ಸಂಘಟಿಸಿ ಅವರನ್ನು ಕಾರ್ಮಿಕ ಆಂದೋಲನದೊಂದಿಗೆ ತೊಡಗಿಸುವ ಅಗತ್ಯದ ಮೇಲೆ, ಕಾಂಟ್ರಾಕ್ಟ್ ಮತ್ತು ಕ್ಯಾಶುವಲ್ ಕಾರ್ಮಿಕರ ಪ್ರಶ್ನೆಗಳನ್ನೆತ್ತಿ ಕೊಳ್ಳುವುದರ ಮೇಲೆ, ಕಾರ್ಮಿಕ ಸಂಘಗಳಲ್ಲಿ ಮಹಿಳಾ ಕಾರ್ಮಿಕರ ಭಾಗವಹಿಸುವಿಕೆಯ ಮೇಲೆ ಒತ್ತು ನೀಡಿದರು. ಹರಿಜನ, ಗಿರಿಜನ ಕಾರ್ಮಿಕರು, ಮುಸ್ಲಿಂ ಕಾರ್ಮಿಕರ ನಡುವೆ ಕೆಲಸದ ಮೇಲೆ ವಿಶೇಷ ಒತ್ತು ನೀಡಿದರು. ಅವರ ಮಟ್ಟಿಗೆ ಈ ಎಲ್ಲಾ ವಿವಿಧ ವಿಭಾಗಗಳನ್ನು ಈಗಿನ ಭಾರತದ ಪರಿಸ್ಥಿತಿಯಲ್ಲಿ ಟ್ರೇಡ್ ಯೂನಿಯನ್ ಆಂದೋಲನ ನಿರ್ಲಕ್ಷಿಸಿದೆ. ಈ ಸತತ ಒತ್ತಾಸೆಗಳ ಫಲವಾಗಿ ಕಳೆದ ಒಂದು ದಶಕದಲ್ಲಿ ಸಿ.ಐ.ಟಿ.ಯು. ಈ ಎಲ್ಲಾ ಪ್ರಶ್ನೆಗಳನ್ನು ಒಂದೊಂದಾಗಿ ಸುಸಂಘಟಿತ ರೀತಿಯಲ್ಲಿ ಕೈಗೆತ್ತಿಕೊಂಡಿದೆ. ಆದರೆ ಕಾರ್ಮಿಕ ಸಂಘಗಳ ಈಗಿನ ಕಾರ್ಯನಿರ್ವಹಣೆಯ ನೀತಿಯನ್ನು (ಅವರು ಇದನ್ನು 'ಹಳ್ಳ ಬಿದ್ದ ಜಾಡು' ಎಂದು ಬೈಯುತ್ತಿದ್ದರು) ಬದಲಿಸ ಬೇಕೆಂದು ಮತ್ತೆ ಮತ್ತೆ ಅವರು ಕರೆ ನೀಡಿದ್ದರೂ ನಮ್ಮ ಹಲವಾರು ಮುಖಂಡರು, ಕಾರ್ಯಕರ್ತರು ಇನ್ನೂ ಅದರತ್ತ ಲಕ್ಷ್ಯ ಕೊಟ್ಟಿಲ್ಲ.

ಕಾರ್ಮಿಕ ಆಂದೋಲನ ಕೇವಲ ಉದ್ಯೋಗಸ್ಥರ ಸಂಘಟನೆಯಾಗಿಯೇ ಮಿತಿಗೊಳ್ಳಲು ಸಾಧ್ಯವಿಲ್ಲ ಎಂದು ನಮಗೆ ಕಲಿಸಿದ ಖ್ಯಾತಿ ಬಿ.ಟಿ.ಆರ್. ರವರದ್ದು. ನಿರುದ್ಯೋಗಿಗಳನ್ನು ಸಂಘಟಿಸುವುದು ಎಷ್ಟು ಮಹತ್ವದ್ದು ಎಂದು ಕಾಣುವಂತೆ ನಮ್ಮನ್ನು ಒತ್ತಾಯಿಸಿದರು ಅವರು. ಅವರ ಯಂಗ್ ವರ್ಕರ್ಸ್ ಲೀಗ್ (ಯುವ ಕಾರ್ಮಿಕರ ಸಂಘ) ಫೆಬ್ರುವರಿ ೧೨, ೧೯೩೩ ರಲ್ಲೇ ನಿರುದ್ಯೋಗ ದಿನ ಆಚರಿಸಿತ್ತು. ಸುಕೋಮಲ್ ಸೆನ್ ಇದನ್ನು ದಾಖಲಿಸಿ ದ್ದಾರೆ. ಅದು ಚರಿತ್ರೆಯ ಭಾಗ. ಇತ್ತೀಚೆಗಷ್ಟೇ ಮುಗಿದ ದುರ್ಗಾಪುರದ ಕೆಲಸದ ಹಕ್ಕಿನ ಸಮಾವೇಶ (ಏಪ್ರಿಲ್ ೨, ೩) ದಲ್ಲಿ ನಿರುದ್ಯೋಗ ಪ್ರಶ್ನೆಯ ಮೇಲೆ. ಬಿ.ಟಿ.ಆರ್.ರವರ ಪ್ರಬಂಧ ಮಂಡನೆ ಯಾಗಿದೆ. ಬಿ.ಟಿ.ಆರ್. ನಂತರ ಈಗ ಈ ಕರ್ತವ್ಯವನ್ನು, ಜತೆಗೆ ಅಸಂಘಟಿತರನ್ನು, ಮಹಿಳೆಯರನ್ನು, ದುರ್ಬಲ ವಿಭಾಗ ಗಳನ್ನು ಸಂಘಟಿಸುವ ಅವರ ಮಾರ್ಗ ವನ್ನು ನಾವು ಚೈತನ್ಯ ಪೂರ್ಣವಾಗಿ ಮುಂದುವರೆಸಬೇಕು.

ಮಹಿಳೆಯರ ಕುರಿತು ನಮ್ಮದೇ ಸಂಗಾತಿಗಳ ಪಾಳೆಯಗಾರಿ ನಿಲುವನ್ನು ಅವರಷ್ಟು ಗಟ್ಟಿಯಾಗಿ ಬೇರೆ ಯಾವ ಮುಖಂಡರೂ ಖಂಡಿಸಿಲ್ಲ. ನಾವೆಲ್ಲಾ ಮನೆಯಲ್ಲಿ ಹಿಂದೂ ಗಂಡಂದಿರು, ಹೊರಗೆ ಮಾತ್ರ ಸಂಗಾತಿಗಳು ಎಂಬ ಅವರ ಬೈಗಳು ಸದುದ್ದೇಶಪೂರಿತ ಆದರೆ ನಮ್ಮಲ್ಲಿ ಎಷ್ಟು ಮಂದಿ ಅದನ್ನು ಗಂಭೀರವಾಗಿ ತೆಗೆದುಕೊಂಡಿದ್ದಾರೆ? ನಮ್ಮಲ್ಲಿ ಬಹಳ ಜನ ಹಳೆಯ ರೀತಿ ಯಲ್ಲೇ ದಬ್ಬಾಳಿಕೆಯ ಗಂಡಂದಿರಾಗಿ ಮುಂದುವರೆಯುತ್ತಿದ್ದಾರೆ ಅಥವಾ ತಮ್ಮ ಹೆಂಡಂದಿರ ಮೇಲೇನೇ ಎಲ್ಲ ಜವಾಬ್ದಾರಿ ಬಿಟ್ಟು ಅವರನ್ನು ನಮ್ಮ ಕರ್ತವ್ಯ ನಿಭಾಯಿಸುವ ಕಾಯಕ ದಲ್ಲಿ ತೊಡಗಿಸುವುದರಿಂದ, ತಪ್ಪಿಸಿಕೊಳ್ಳುತ್ತಾರೆ. ನಮಗೆ ಈ ಪ್ರಶ್ನೆ ಬಗ್ಗೆ ಏನಾದರೂ ಪ್ರಜ್ಞೆ ಬಂದಿದ್ದರೆ ಬಿ.ಟಿ.ಆರ್. ರವರಿಂದಲೇ.

ಕಾಂ। ಬಿ.ಟಿ.ಆರ್. ಸುಮಾರಾಗಿ ಸಂರಕ್ಷಕನಂತೆಯೇ ನಿಂತ ಕೆಲವು ತತ್ವಗಳನ್ನು ಹೇಳದೆ ಸಿ.ಐ.ಟಿ.ಯು. ಮಾರ್ಗದ ಬಗ್ಗೆ ಮಾತು ಅಪೂರ್ಣ ವಾಗುತ್ತದೆ. ಬೋನಸ್ಸನ್ನು ಉತ್ಪಾದನೆಗೆ ಕೊಂಡಿಹಾಕಬಾರದು, ತಮ್ಮ ಮಕ್ಕಳಿಗೆ ತಮ್ಮ ಕಾರ್ಖಾನೆಗಳಲ್ಲಿ ಕೆಲಸ ಮೀಸಲಿಡ ಬೇಕೆಂದು ಒತ್ತಾಯಿಸಬಾರದು ಇತ್ಯಾದಿ ನೀತಿಗಳನ್ನು ಸದಾ ಅವರು ಸಂರಕ್ಷಿಸಿ ಕೊಂಡು ಬಂದುದನ್ನು ನಾವು ಕಂಡಿದ್ದೇವೆ. ನಾವು ಹೋರಾಟಗಳಲ್ಲಿ ಬಿರುಸಾಗಿರಬಾರದು. ಸನ್ನಿವೇಶಕ್ಕೆ ಬೇಗನೇ ಸ್ಪಂದಿಸುವಂತಿರಬೇಕು. ಕಾರ್ಮಿಕರು ಮುಖಂಡನ್ನು ಕೈಬಿಡದಂತಿರಬೇಕು ಎಂದು ಅವರು ನಂತರದ ವರ್ಷಗಳಲ್ಲಿ ಒತ್ತಿ ನೀಡಿ ಹೇಳುತ್ತಿದ್ದರು. ಕಾರ್ಮಿಕ ಸಂಘವನ್ನು ಪ್ರಜಾಸತ್ತಾತ್ಮಕವಾಗಿ ನಡೆಸು ವುದರ ಅಗತ್ಯವನ್ನು ಹೇಳುತ್ತಾ ಕಾರ್ಮಿ ಕರು ನೀತಿ ನಿರ್ಧಾರಣೆಯಲ್ಲಿ ಭಾಗವಹಿಸುವಂತೆ ಮಾಡಲು, ಅವರ ಬೆನ್ನ ಹಿಂದೆ ಏನೂ ನಡೆಯದಂತೆ ಮಾಡಲು ಅತ್ಯಗತ್ಯ ಎಂದು ಒತ್ತಿ ಹೇಳುತ್ತಿದ್ದರು. ಈ ಲೇಖನದ ಸೀಮಿತ ಉದ್ದೇಶ ನಮ್ಮ ಆಂದೋಲನದ ಮೇಲೆ ಶಾಶ್ವತ ಹೆಜ್ಜೆ ಗುರುತು ಬಿಟ್ಟಿರುವ ಕಾಂ. ಬಿ.ಟಿ.ಆರ್. ರವರ ಕೊಡುಗೆಗಳನ್ನು ಎತ್ತಿ ತೋರಿಸು ವುದು ಆದ್ದರಿಂದ ಈ ಅಂಶಗಳನ್ನು ನಾವಿಲ್ಲಿ ಹೆಚ್ಚು ವಿವರವಾಗಿ ಪರಿಶೀಲಿಸುವುದಿಲ್ಲ.



★ ೧೬ನೇ ರಾಜ್ಯ ಸಮ್ಮೇಳನದಲ್ಲಿ - ಲಾಲ್ ಸಲಾಂ



★ ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋ (೧೯೬೪)

ಒಳ ಹೋರಾಟಗಳ ಛಾಪು

೧೯೬೪ ಸಿ.ಪಿ.ಐ(ಎಂ) ನ ಆರಂಭ ವಾಗದೆ ಸಿ.ಐ.ಟಿ.ಯು. ಸ್ಥಾಪನೆಯೇ ಸಾಧ್ಯವಿರಲಿಲ್ಲ. ಅವಿಭಜಿತ ಸಿ.ಪಿ.ಐ. ನಲ್ಲಿ ಈಗಿನ ಸಿ.ಪಿ.ಐ(ಎಂ) ಮುಖಂಡರು ವರ್ಗ ಶಾಮೀಲಿನ ಮಾರ್ಗದ ವಿರುದ್ಧ ಮಾಡಿದ ಹೋರಾಟಗಳು ಹಲವು ಭಾರಿ ವೈಯಕ್ತಿಕವಾಗಿ ಬಿ.ಟಿ.ಆರ್. ರವರ ಹೆಸರನ್ನೇ ಹೊಂದಿವೆ. ಅವುಗಳಲ್ಲಿ ಬಹುಪಾಲು ಎಷ್ಟೊಂದು ಸ್ಮರಣೀಯವೆಂದರೆ ಕ್ರಾಂತಿಕಾರಿಗಳ ವೇಷ ತೊಟ್ಟ ಸುಧಾರಣಾ ವಾದಿಗಳಿಗೆ ಆಗ ಪಕ್ಷದಲ್ಲಿ ಪ್ರಬಲ ಸ್ಥಾನ ಹೊಂದಿದವರಿಗೆ

ಮುಂದುವರೆಯುವುದು.

ಬೆಂಗಳೂರಿನಲ್ಲಿ ಶ್ರದ್ಧಾಂಜಲಿ

ಕಾಂ. ಬಿ.ಟಿ.ಆರ್. ತೀವ್ರವಾಗಿ ಅಸ್ವಸ್ಥ ರಾಗಿದ್ದರೆಂದು ಮೊದಲೆ ತಿಳಿದಿದ್ದರೂ ೬ನೇ ತಾರೀಕಿನ ಮುಂಜಾನೆ ಅವರ ನಿಧನದ ಸುದ್ದಿ ಬೆಂಗಳೂರಿನ ಕಾರ್ಮಿಕ ವರ್ಗಕ್ಕೆ ಅನಿರೀಕ್ಷಿತವೇ ಆಗಿತ್ತು. ಸಿ.ಪಿ.ಐ(ಎಂ)ಹಾಗೂ ಸಿ.ಐ.ಟಿ.ಯು.ವಿನ ಬೆಂಗಳೂರು ಜಿಲ್ಲಾ ಸಮಿತಿಯ ಕರೆಯ ಮೇರೆಗೆ ನಗರದ ಮೂಲೆ ಮೂಲೆಯಿಂದ ನೂರಾರು ಹೋಟೆಲ್, ಕಾರ್ಖಾನೆಗಳು, ಸಾರ್ವಜನಿಕ ವಲಯದ ಕಾರ್ಮಿಕರು, ನೌಕರರು ಚಿಕ್ಕಲಾಲ್‌ಬಾಗ್‌ನಲ್ಲಿ ಸಭೆ ಸೇರಿ ಅಲ್ಲಿಂದ ಮೈಸೂರು ಬ್ಯಾಂಕ್ ವೃತ್ತದವರೆಗೆ ಮೌನ ಮೆರವಣಿಗೆಯಲ್ಲಿ ಸಾಗಿ ಶ್ರದ್ಧಾಂಜಲಿ ಅರ್ಪಿಸಿದರು. 'ಬಿ.ಟಿ.ಆರ್. ಕೆಂಪು ವಂದನೆ' "ಬಿ.ಟಿ.ಆರ್. ಹಾಕಿಕೊಟ್ಟ ದಾರಿ ನಮ್ಮ ಗುರಿ, ನಮ್ಮ ಧ್ಯೇಯ" ಮುಂತಾಗಿ ಸಾರುವ ಫಲಕಗಳನ್ನು ಹೊತ್ತು ಮೌನ ವಾಗಿಸಾಗಿದ್ದರು ಕಾರ್ಮಿ ಕರು, ನೌಕರರು.

ಮೆರವಣಿಗೆಯ ಕೊನೆಯಲ್ಲಿ ಮೈಸೂರುಬ್ಯಾಂಕ್‌ವೃತ್ತದಲ್ಲಿ ಸಂತಾಪ ಸೂಚಕ ಸಭೆ ಸಿ.ಐ.ಟಿ.ಯು. ಜಿಲ್ಲಾ ಉಪಾಧ್ಯಕ್ಷ ಹಾಗೂ ಸಿ.ಪಿ.ಐ.(ಎಂ) ಜಿಲ್ಲಾ ಸೆಕ್ರೆಟಾರಿಯೆಟ್ ಸದಸ್ಯ ಕಾಂ. ಆರ್. ಶ್ರೀನಿವಾಸ್ ಅಧ್ಯಕ್ಷತೆಯಲ್ಲಿ ನಡೆಯಿತು. ಸಿ.ಪಿ.ಐ(ಎಂ) ರಾಜ್ಯ ಕಾರ್ಯದರ್ಶಿ ಹಾಗೂ ಕೇಂದ್ರ ಸಮಿತಿ ಸದಸ್ಯ ಕಾಂ. ಪಿ. ರಾಮಚಂದ್ರರಾವ್ ಜನತಾ ಪ್ರಜಾಪ್ರಭುತ್ವ ಕ್ರಾಂತಿಯ ಮಾರ್ಗ ರೂಪಿಸುವಲ್ಲಿ ಹಾಗೂ ಕಾರ್ಮಿಕ ವರ್ಗದ ಐಕ್ಯ ಹೋರಾಟ ರೂಪಿಸುವಲ್ಲಿ ಬಿ.ಟಿ.ಆರ್. ರವರ ಮಹತ್ವ ಪಾತ್ರವನ್ನು ವಿವರಿಸಿದರು. ಸಿ.ಐ.ಟಿ.ಯು ರಾಜ್ಯ ಕಾರ್ಯದರ್ಶಿ ಹಾಗೂ ಸಿ.ಪಿ.ಐ.(ಎಂ) ರಾಜ್ಯ ಸೆಕ್ರೆಟಾರಿ ಯೆಟ್ ಸದಸ್ಯ ಕಾಂ. ನಂಜುಂಡಪ್ಪ ನವರು, ದೇಶದ ಕಾರ್ಮಿಕ ಚಳುವಳಿ ಯಲ್ಲಿ, ವಿಶೇಷವಾಗಿ ಮಹಿಳಾ ಕಾರ್ಮಿಕ ರ ಬೇಡಿಕೆಗಳತ್ತ ಕಾರ್ಮಿಕ ಚಳುವಳಿಯ ಗಮನವನ್ನು ಕೂಡಾ ಸೆಳೆಯುವಲ್ಲಿ, ಅವರ ಮಹಾನ್ ಕೊಡುಗೆಯನ್ನು ಸ್ಮರಿಸಿದರು. ಬೆಂಗಳೂರಿನ ಕಾರ್ಮಿಕ ವರ್ಗದ ಪರವಾಗಿ ಸಿ.ಐ.ಟಿ.ಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾಂ. ಕೆ. ಎನ್. ಸುಬ್ಬಮ್ಮ ಶ್ರದ್ಧಾಂಜಲಿ ಅರ್ಪಿಸಿದರು. ಆರಂಭದಲ್ಲಿ ಸಿ.ಪಿ.ಐ.(ಎಂ) ಜಿಲ್ಲಾ ಸೆಕ್ರೆಟಾರಿಯೆಟ್ ಹಾಗೂ ರಾಜ್ಯ ಸಮಿತಿ ಸದಸ್ಯ ಕಾಂ. ಎಸ್. ಆರ್. ಆರಾಧ್ಯ ಸ್ವಾಗತಿಸಿದರು.

ಏಪ್ರಿಲ್ ೧೧ರಂದು ಈ ಮಹಾನ್ ಕ್ರಾಂತಿಕಾರಿಗೆ ಯೋಗ್ಯವಾದ ಭವ್ಯ ಸಾರ್ವತ್ರಿಕ ಶ್ರದ್ಧಾಂಜಲಿ ಸಭೆ [illegible] ಕೆ ನಿರ್ಧರಿಸಲಾಯಿತು.








ಅಂತಿಮ ಪಯಣ

ದುಃಖತಪ್ತ ಸೋದರಿ ಅಹಲ್ಯಾ ರಂಗ್ನೇಕರ್, ಪತ್ನಿ ವಿಮಲಾ ಪುತ್ರ ಉದಯನಿಂದ ಅಂತಿಮ ಗೌರವ





ಶ್ರದ್ಧಾಂಜಲಿ ಅರ್ಪಿಸಲು ಆಗಮಿಸುತ್ತಿರುವ ಮುಖ್ಯಮಂತ್ರಿ ಶರದ್ ಪವಾರ್.



ಲಾಲ್ ಸಲಾಂ ಲಾಲ್ ಸಲಾಂ.

೧೯೨೦ರ ಚಳುವಳಿಯಲ್ಲಿ ಹದಿನಾರರ ಯುವಕ ಅಂದಿನ ಎಲ್ಲಾ ರಾಜಕೀಯ ಪ್ರಚಾರ ಸಭೆಗಳ ಮೊದಲ ಕೇಳುಗ. ಸಂಜೆ ೬ ಗಂಟೆಯ ಸಭೆಗೆ ೩ ಗಂಟೆಗೇ ಹೋಗಿ ಜಾಗವನ್ನು ಹಿಡಿದು ಚರ್ಚಿಸುತ್ತಾ ಕೂಡುವಾತ. ಅಸಹಕಾರ ಚಳುವಳಿಯ, ಖಿಲಾಫತ್ ಚಳುವಳಿಯ ಕಾಳಗದ ಕರೆಗಳನ್ನು ಕೇಳಿ ಉತ್ಸಾಹ ಉಕ್ಕೇರಿ ಕಾಳಗದ ಕಣಕ್ಕೆ ಧುಮುಕಿದಾತ. ನೀನು ರಾಜಕೀಯಕ್ಕೆ ಧುಮುಕ ಬೇಕೆಂದರೆ ಗಾಂಧೀಜಿಯ ಸಬರಮತಿ ಆಶ್ರಮವನ್ನು ಸೇರು ಎಂದ ತಂದೆಯ ಮಾರ್ಗದರ್ಶನವನ್ನೊಲ್ಲೆ ಎಂದು ಬಾಂಬೆಯ ಗಿರಣಿ ಕಾರ್ಮಿಕರ ಕಾಳಗ ಕಣದ ರಂಗ ಮಧ್ಯಕ್ಕೆ ಧುಮುಕಿದಾತ. ೧೯೨೭-೨೮ರ ಗಿರಣಿ ಕಾರ್ಮಿಕರಹೋರಾಟಗಳಲ್ಲಿ ಕಾರ್ಮಿಕರ ನೆಚ್ಚಿನ ಕಣ್ಮಣಿಯಾದ ನಾಯಕ. ಅಂದಿನಿಂದಲೇ "ಸ್ಪಾರ್ಕ್"(ಕಿಡಿ), "ಕ್ರಾಂತಿ","ರೈಲ್ವೆಮ್ಯಾನ್" ಪತ್ರಿಕೆಗಳಲ್ಲಿ ಬ್ರಿಟಿಷರ ಬಜೆಟ್‌ಗಳ ವಿರುದ್ಧ ಕತ್ತಿಮಸೆಯುತ್ತಿದ್ದ ಅರ್ಥಶಾಸ್ತ್ರಜ್ಞ.

ಭಾರತದ ಸ್ವಾತಂತ್ರ್ಯ ಹೋರಾಟದ ಪಥವನ್ನು ತುಳಿಯುತ್ತಾ ಜನತೆಯ ಕ್ರಾಂತಿ ಕುಸುಮದತ್ತ ಕೈ ಚಾಚಿದಾತ. ಕ್ರಾಂತಿಯತ್ತ ದೇಶವನ್ನು ನಡೆಸಲು ತವಕಿಸಿದಾತ. ಈ ತವಕ, ವಿಶ್ರಾಂತಿಯನ್ನು ಕಾಣದ ದುಡಿತವೇ ಅವರನ್ನು ಕಾರ್ಮಿಕಕೋಟಿಯ ಹೃದಯಗಳಲ್ಲಿ ಜೀವಂತವಾಗಿಸಿದೆ.

ಭಾರತದ ಕ್ರಾಂತಿಯ ಪಥವನ್ನು ಕಂಡರಿಸುವಲ್ಲಿ ಅಪಾರ ಕಾಣಿಕೆ ನೀಡಿದ ಈ ಮಹಾಮೇಧಾವಿ ಇನ್ನಿಲ್ಲ. ಸ್ವಾತಂತ್ರ್ಯದ ಬೆಳ್ಳಿ ಬೆಳಕು ಇನ್ನು ಆಗತಾನೆ ಕಾಣ ಹತ್ತಿದಾಗಲೇ ಕಾಂಗ್ರೆಸ್ ಪಕ್ಷದ ಬಾಲ ಬಡಿಯುವ ಪರಿಷ್ಕರಣವಾದಿ ರೋಗ ಕಾಡಲಾರಂಭಿಸಿತು. ಅಂದಿನಿಂದ ಹಿಡಿದು ಇಂದಿನವರೆಗೆ ದೇಶದ ಹಾಗೂ ಅಂತರರಾಷ್ಟ್ರೀಯ ಪರಿಷ್ಕರಣವಾದದ ವಿರುದ್ಧ ಹಾಗೆಯೇ ಎಡಪಂಥವಾದ ನಡೆಸಿದ ತೀವ್ರ ಹೋರಾಟದಲ್ಲಿ ಭಾಗವಹಿಸಿಧ ಹಲವು ಕಾಳಗಗಳ ಕಲಿ ಇನ್ನಿಲ್ಲ. ಜಗತ್ತಿನಲ್ಲಿ ಕಮ್ಯುನಿಸ್ಟ್ ಚಳುವಳಿ ಎದುರಿಸುತ್ತಿರುವ ಬಿಕ್ಕಟ್ಟಿನ ಸಂದರ್ಭದಲ್ಲಿ ಬಿ.ಟಿ.ಆರ್.ರ ಅಗತ್ಯ ಹಿಂದೆಂದಿಗಿಂತಲೂ ಹೆಚ್ಚಾಗಿತ್ತು.

ಭಾರತದಲ್ಲಿ ಮಾರ್ಕ್ಸ್‌ವಾದಿ ಚಳುವಳಿ ವಿಜಯದಿಂದ ವಿಜಯದತ್ತ ದಾಪುಗಾಲು ಹಾಕುತ್ತಿರುವ ವೇಳೆಯಲ್ಲಿ ಚಳುವಳಿಯ ಪ್ರಮುಖ ಆಧಾರ ಸ್ಥಂಭವೊಂದು ಕಳಚಿ ಬಿದ್ದಿದೆ. ಇಂತಹ ಸನ್ನಿವೇಶದಲ್ಲಿ ಭಾರತದ ಕಾರ್ಮಿಕ ವರ್ಗ ಹಾಗೂ ಅದರ ಮುಂಚೂಣಿಯಾದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಸಮರ ಸೇನಾನಿ ಬಿ.ಟಿ.ಆರ್.ರವರು ಕಡೆದಿಟ್ಟ ಹಾದಿಯಲ್ಲಿ ಧೀರವಾದ, ಧೃಡವಾದ ಹೆಜ್ಜೆಗಳನ್ನು ಹಾಕುತ್ತಾ ಸಾಗುವ ಪಣ ತೊಡಬೇಕು.

ಜಿ. ಎನ್. ನಾಗರಾಜ್.